ದೆಹಲಿ ಕರ್ನಾಟಕ ಸಂಘದ

# ಅಭಿಮತ

ಇಪ್ಪತ್ತರ ಹೊಸ್ತಿಲಲ್ಲಿ

ಆಗಸ್ಟ್ 2010
ಬೆಲೆ ರೂ. 1.



## ದೆಹಲಿಯಲ್ಲೊಂದು

### ಶ್ರೀನಿವಾಸ ಮಲ್ಯ ಸ್ಮಾರಕ

# Every City is My City!

with

**KBL**
**Multi Branch Banking**

Operate your account across the country

**KBL**
**Multi City Cheque**

Reach your account from anywhere in the country




**Karnataka Bank Ltd.**
Your Family Bank. Across India.

Regd. & Head Office: Mangalore - 575 002
E-mail: info@ktkbank.com Visit us at: www.karnatakabank.com

**ಪ್ರಧಾನ ಸಂಪಾದಕರು**
ವಸಂತ ಶೆಟ್ಟಿ ಬೆಳ್ಳಾರೆ

**ಸಂಪಾದಕ ಮಂಡಳ**
ಮಹಾಬಲೇಶ್ವರ ಭಟ್ ಕೆ.
ಸಂತೋಷ್ ಕುಮಾರ್ ಉಪಾಧ್ಯಾಯ
ಡಾ. ಸುಮಂಗಲಾದೇವಿ
ನಂದಿನಿ ಮಲ್ಯ
ಸಾಮ್ರಾಟ್ ಗೌಡ
ಸರೋಜಾ ವಿಜಯಕುಮಾರ್

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷರು**
ಸಿ.ವಿ. ಗೋಪಿನಾಥ್

**ಉಪಾಧ್ಯಕ್ಷರು**
ವಸಂತ ಶೆಟ್ಟಿ ಬೆಳ್ಳಾರೆ
ಉಷಾ ಭರತಾದ್ರಿ

**ಪ್ರಧಾನ ಕಾರ್ಯದರ್ಶಿ**
ಆರ್. ರೇಣುಕುಮಾರ್

**ಖಜಾಂಚಿ**
ಎಂ.ವಿ. ವೆಂಕಟೇಶ್

**ಜಂಟಿ ಕಾರ್ಯದರ್ಶಿಗಳು**
ಎನ್.ಆರ್. ಶ್ರೀನಾಥ್
ಡಾ. ಹೇಮಲತಾ ಮೂರ್ತಿ

**ಸಮಿತಿ ಸದಸ್ಯರು**
ಅಂಜನಿ ಗೌಡ
ಹರಿಶ್ಚಂದ್ರ ಬಂಟ್ವಾಳ್
ಟಿ.ಎಂ. ಮೈಲಾರಪ್ಪ
ವಿ.ವಿ. ಬಿರಾದಾರ
ಸಿ.ಆರ್. ಶ್ರೀನಿವಾಸ
ಕೆ.ಎಸ್.ಜಿ. ಶೆಟ್ಟಿ
ರಾಧಾಕೃಷ್ಣ
ಭಂಡಾರ್‌ಕರ್ ಎಸ್.ಎಲ್
ಇಸ್ಮಾಯಿಲ್ ಬುಡಂದಿ
ಬಿ.ಆರ್.ಮಹಾಲಿಂಗಪ್ಪ

**ಮುಖಪುಟ ಚಿತ್ರ ಕೃಪೆ**
ವಿಶ್ವ ಕೊಂಕಣಿ ಕೀರ್ತಿ ಮಂದಿರ
ವಿಶ್ವ ಕೊಂಕಣಿ ಕೇಂದ್ರ
ಮಂಗಳೂರು

**DELHI KARNATAKA SANGHA**
Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com

ಅಭಿಮತ ಸಂಪುಟ 20 ಸಂಚಿಕೆ 11
ಆಗಸ್ಟ್ 2010, ಬೆಲೆ ರೂ. 1

# ನಿಮ್ಮೊಂದಿಗೆ

ದೆಹಲಿ ನಗರದಲ್ಲಿ ಒಂದೆಡೆ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕಾಗಿ ಸಿದ್ಧತೆ, ಇನ್ನೊಂದೆಡೆ ಸ್ವಾತಂತ್ರೋತ್ಸವದ ಆಚರಣೆಯ ಸಲುವಾಗಿ ಭದ್ರತೆ ಕೆಲಸ ನಡೆಯುತ್ತಿದೆ. ಸ್ವಾತಂತ್ರೋತ್ಸವದ ಈ ಸಂದರ್ಭದ ಸಂಚಿಕೆಯಲ್ಲಿ ನೂತನ ದಕ್ಷಿಣ ಕನ್ನಡದ ಶಿಲ್ಪಿ ಉಳ್ಳಾಲ ಶ್ರೀನಿವಾಸ ಮಲ್ಯರವರ ಸ್ಮಾರಕ ದೆಹಲಿಯಲ್ಲಿರುವ 'ಆರ್ಟ್ಸ್ ಎಂಡ್ ಕ್ರಾಫ್ಟ್ಸ್' ಮ್ಯೂಸಿಯಂನ ಬಗೆಗೆ ವಿಶೇಷ ಲೇಖನವೊಂದನ್ನು ನೀಡುತ್ತಿದ್ದೇವೆ. ಕನ್ನಡಿಗನೊಬ್ಬನ ಸ್ಮಾರಕ ದೆಹಲಿ ನಗರದಲ್ಲಿ ಇರುವುದು ಬಹುತೇಕ ಜನರಿಗೆ ತಿಳಿದೇ ಇಲ್ಲ. ಖಚಿತವಾದ ಸದುದ್ದೇಶಗಳನ್ನು ಇಟ್ಟುಕೊಂಡು ಸಂಘ-ಸಂಸ್ಥೆ, ಚಾರಿಟೆಬಲ್ ಟ್ರಸ್ಟ್, ಸ್ಮಾರಕಗಳನ್ನು ಬಹಳ ಕಷ್ಟಪಟ್ಟು ದುಡಿದು ಆರಂಭಿಸುತ್ತಾರೆ. ಆದರೆ ಹೆಚ್ಚಿನ ಈ ರೀತಿಯ ಸಂಸ್ಥೆಯನ್ನು ಆರಂಭಿಸಿದವರು/ಸಂಸ್ಥೆಗಳು ಸರಿಯಾದ ಉತ್ತರಾಧಿಕಾರಿಯನ್ನು ತಯಾರು ಮಾಡದೇ ಇರುವುದರಿಂದ ಅವು ಮುಂದೊಂದು ದಿನ ಅಳಿವಿನ ಅಂಚಿಗೆ ತಲುಪುತ್ತವೆ.

ದೆಹಲಿಯಲ್ಲಿರುವ ಶ್ರೀನಿವಾಸ ಮಲ್ಯ ಸ್ಮಾರಕ ಮುಂದೊಂದು ದಿನ ಈ ಪಟ್ಟಿಗೆ ಸೇರಿದರೆ ಅಶ್ಚರ್ಯವೇನಿಲ್ಲ. ಇಂತಹ ಸ್ಮಾರಕವನ್ನು ಮುನ್ನಡೆಸಲು ಆರ್ಥಿಕ ಸಹಾಯದ ಜೊತೆಗೆ ಅದರ ಧ್ಯೇಯೋದ್ದೇಶವನ್ನು ಸರಿಯಾಗಿ ಬಲ್ಲವರ ಕೈಗೆ ಅದರ ಆಡಳಿತವನ್ನು ವಹಿಸಬೇಕು. ಕನ್ನಡಿಗರಾದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಪರಿಶ್ರಮದ ಈ ಸ್ಮಾರಕವನ್ನು ಕನ್ನಡಿಗರ ಕೈಗೆ ನೀಡಿದರೆ ಮಾತ್ರ ಅವರ ಕನಸು ನನಸಾಗಬಲ್ಲದು. ಶ್ರೀ ಶ್ರೀನಿವಾಸ ಮಲ್ಯ ಹಾಗೂ ಕಮಲಾದೇವಿ ಚಟ್ಟೋಪಾಧ್ಯಾಯರ ಬಗೆಗೆ ಹತ್ತಿರದಿಂದ ಬಲ್ಲ ಕೇಂದ್ರ ಸಚಿವ ವೀರಪ್ಪ ಮೊಯಿಲಿಯವರು ಈ ಬಗ್ಗೆ ಪ್ರಯತ್ನ ಮಾಡಿ ಇದರ ಆಡಳಿತವನ್ನು ದೆಹಲಿ ಕರ್ನಾಟಕ ಸಂಘದಂತಹ ಸಂಸ್ಥೆಗೆ ನೀಡಿದರೆ ಸ್ಮಾರಕ-ಸ್ಮಾರಕವಾಗಿ ಸದಾಕಾಲ ಉಳಿಯಬಲ್ಲದು.

ಕಾಮನ್‌ವೆಲ್ತ್ ಕ್ರೀಡಾಕೂಟಕ್ಕಾಗಿ ದೆಹಲಿ ನಗರ ಸುಂದರವಾಗಿ ರೂಪುಗೊಳ್ಳುತ್ತಿದೆ. ಇಂತಹ ಮಹತ್ತರ ಯೋಜನೆಯ ರೂವಾರಿ ಸುರೇಶ್ ಕಲ್ಮಾಡಿ ಮೂಲತಃ ಉಡುಪಿಯ ಕನ್ನಡಿಗ. ಕಾಮನ್‌ವೆಲ್ತ್ ನಂತಹ ಆಟೋಟ ಸ್ಪರ್ಧೆಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವ ಸರಕಾರ ಸಂಸ್ಕೃತಿಯನ್ನು ಜೀವಂತ ಉಳಿಸಬಲ್ಲ ಶ್ರೀನಿವಾಸ ಮಲ್ಯ ಸ್ಮಾರಕಕ್ಕೆ ಇನ್ನೊಂದಷ್ಟು ಪುಡಿ ಕಾಸು ನೀಡುವುದೇ ?

ಸ್ವಾತಂತ್ರ್ಯೋತ್ಸವದ ಪೂರ್ವ ಸಂದರ್ಭದ ಹೊತ್ತಿಗೆ ಡಾ. ಜಿ.ವಿ. ಬಿರಾದಾರ ಅವರು ಬರೆದ 'ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳವಳಿ' ಹೊತ್ತಿಗೆ ಸಂಘದಲ್ಲಿ ಬಿಡುಗಡೆಗೊಂಡಿದೆ. ಬಿಜಾಪುರ, ಬೆಳಗಾವಿ, ಧಾರವಾಡ ಮತ್ತು ಉತ್ತರ ಕನ್ನಡಗಳಲ್ಲಿ ಜನಸಾಮಾನ್ಯ ಕನ್ನಡಿಗರು ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮದೇ ಆದ ವಿಭಿನ್ನ ರೀತಿಯಲ್ಲಿ ಪಾಲ್ಗೊಂಡಿರುವ ರೀತಿಯನ್ನು ಹಾಗೂ ಹೋರಾಟದಲ್ಲಿ ಗಾಂಧೀಜಿಯವರು ತಮ್ಮ ಕರ್ನಾಟಕ ಪ್ರವಾಸ ಸಂದರ್ಭದಲ್ಲಿ ಕನ್ನಡಿಗರು ಸ್ಪಂದಿಸಿದ ಪರಿಯನ್ನು ತುಂಬಾ ಸರಳ ಹಾಗೂ ಕಥಾನಕ ರೂಪದಲ್ಲಿ ಸಾದರಪಡಿಸಿದ್ದಾರೆ. ಇದೊಂದು ಕನ್ನಡಿಗರು ಓದಲೇ ಬೇಕಾದ ಅತೀ ಮಹತ್ವದ ಕೃತಿ.

ಸ್ವಾತಂತ್ರ್ಯೋತ್ಸವದ ಶುಭಾಶಯಗಳೊಂದಿಗೆ.

**■ ವಸಂತ ಶೆಟ್ಟಿ ಬೆಳ್ಳಾರೆ**
**ಪ್ರಧಾನ ಸಂಪಾದಕರು**

# ದೆಹಲಿ ಕರ್ನಾಟಕ ಸಂಘ

**64ನೇ ಸ್ವಾತಂತ್ರೋತ್ಸವ ದಿನಾಚರಣೆ**

ದಿನಾಂಕ : 15.08.2010

ಧ್ವಜಾರೋಹಣ : ಬೆಳಗ್ಗೆ 8.00ಗಂಟೆಗೆ



ಸಂಘದ ಕಲಾವಿದರಿಂದ

ದೇಶ ಭಕ್ತಿ ಗೀತೆಗಳು

ದಿನಾಂಕ: 15.08.2010

ಸಾಯಂಕಾಲ 4.00 ಗಂಟೆಗೆ

ಸ್ಥಳ : ಸಂಘದ ಸಭಾಂಗಣ

**ಶ್ರೀ ಶಿವಧ್ವಜ್ ನಿರ್ದೇಶನದ**

## ‘ಗಗ್ಗರ’

**ತುಳು ಚಲನಚಿತ್ರ ಪ್ರದರ್ಶನ**

## ತಮಗೆಲ್ಲರಿಗೂ ಆದರದ ಸ್ವಾಗತ

ಸಿ ವಿ. ಗೋಪಿನಾಥ್
ಅಧ್ಯಕ್ಷರು

ಆರ್.ರೇಣುಕುಮಾರ್
ಪ್ರಧಾನ ಕಾರ್ಯದರ್ಶಿ

# ದೆಹಲಿ ಕರ್ನಾಟಕ ಸಂಘ

ದಿನಾಂಕ: 22.08.2010

ಸಾಯಂಕಾಲ 4.00 ಗಂಟೆಗೆ

ಸ್ಥಳ : ಸಂಘದ ಸಭಾಂಗಣ

## ಸಂಘದ ಅಂಗಳದಲ್ಲಿ ಕಾವ್ಯ

ವಿಶೇಷ ಸೂಚನೆ : ದೆಹಲಿ ಕನ್ನಡಿಗರು ಸ್ವರಚಿತ ಕವನ ಓದಬಯಸುವವರು ತಮ್ಮ ಹೆಸರನ್ನು ಸಂಘದ ಕಛೇರಿಯಲ್ಲಿ ನೋಂದಾಯಿಸಬೇಕು.

ಫೋನ್ : 011-26109615 / 65643615

## ತಮಗೆಲ್ಲರಿಗೂ ಆದರದ ಸ್ವಾಗತ

ಸಿ ವಿ. ಗೋಪಿನಾಥ್
ಅಧ್ಯಕ್ಷರು

ಆರ್.ರೇಣುಕುಮಾರ್
ಪ್ರಧಾನ ಕಾರ್ಯದರ್ಶಿ

# ದೆಹಲಿ ಕರ್ನಾಟಕ ಸಂಘ

"ಗೆಜ್ಜೆ ಹೆಜ್ಜೆ" ರಂಗ ತಂಡ, ಬೆಂಗಳೂರು
ಇವರಿಂದ

# ನಗೆಹಬ್ಬ

(**ಭಾಗವಹಿಸುವ ಕಲಾವಿದರು** : ಬ್ಯಾಂಕ್ ಜನಾರ್ಧನ್, ಜೋ ವಿಷ್ಣುವರ್ಧನ್, ವೈಜನಾಥ್ ಬಿರಾದಾರ್, ಮೈಸೂರು ರಮಾನಂದ್, ರಥಸಪ್ತಮಿ ಅರವಿಂದ್, ಶಿವಕುಮಾರಾರಧ್ಯ, ಜಯಶ್ರೀ, ಜಗನ್ನಾಥರಾವ್)

ದಿನಾಂಕ: 05.09.2010
ಸಾಯಂಕಾಲ 6.00 ಗಂಟೆಗೆ
ಸ್ಥಳ : ಸಂಘದ ಸಭಾಂಗಣ

## ತಮಗೆಲ್ಲರಿಗೂ ಆದರದ ಸ್ವಾಗತ

ಸಿ ವಿ. ಗೋಪಿನಾಥ್
ಅಧ್ಯಕ್ಷರು

ಆರ್.ರೇಣುಕುಮಾರ್
ಪ್ರಧಾನ ಕಾರ್ಯದರ್ಶಿ

# ದೆಹಲಿ ಕರ್ನಾಟಕ ಸಂಘ

"ಜನಪದರು" ಸಾಂಸ್ಕೃತಿಕ ವೇದಿಕೆ, ಹೊಸಕೋಟೆ
ಇವರು
ಪ್ರಸ್ತುತಪಡಿಸುವ ನಾಟಕ

# ಬುದ್ಧನಾದ

ರಚನೆ : ಬಾಲಗುರುಮೂರ್ತಿ
ನಿರ್ದೇಶನ : ಸುರೇಶ್ ವರ್ತೂರು

ದಿನಾಂಕ: 19.09.2010
ಸಾಯಂಕಾಲ 5.00 ಗಂಟೆಗೆ
ಸ್ಥಳ : ಸಂಘದ ಸಭಾಂಗಣ

## ತಮಗೆಲ್ಲರಿಗೂ ಆದರದ ಸ್ವಾಗತ

ಸಿ ವಿ. ಗೋಪಿನಾಥ್
ಅಧ್ಯಕ್ಷರು

ಆರ್.ರೇಣುಕುಮಾರ್
ಪ್ರಧಾನ ಕಾರ್ಯದರ್ಶಿ

# ಸಂಘದಲ್ಲಿ ಜಯಂತ ಕಾಯ್ಕಿಣಿ

ಕರ್ನಾಟಕದ ಹೆಸರಾಂತ ಲೇಖಕ, ಕತೆಗಾರ, ಕವಿ ಹಾಗೂ ಇತ್ತೀಚಿನ ದಿನಗಳಲ್ಲಿ ಪ್ರಸಿದ್ಧ ಚಿತ್ರ ಸಾಹಿತಿ ಶ್ರೀ ಜಯಂತ ಕಾಯ್ಕಿಣಿಯವರ ಜೊತೆ-ಗೆ ದೆಹಲಿ ಕರ್ನಾಟಕ ಸಂಘವು 23.07.2010ರ ಸಂಜೆ "ಪರಸ್ಪರ" ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಹೆಸರಾಂತ ಜಾನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಮಾತನಾಡಿ ಜಯಂತ ಕಾಯ್ಕಿಣಿಯವರು ಬರೆದ ಲೇಖನ, ಕತೆ, ಕವಿತೆ ಹಾಗೂ ಚಿತ್ರಗೀತೆಗಳ ಮೂಲಕ ಹಲವಾರು ಉದಾಹರಣೆಯನ್ನು ನೀಡಿ ವಿಶ್ಲೇಷಿಸಿದರು. ಕೇಂದ್ರ ಸಾಹಿತ್ಯ ಅಕಾಡೆಮಿ ಕಾರ್ಯದರ್ಶಿ ಅಗ್ರಹಾರ ಕೃಷ್ಣಮೂರ್ತಿಯವರು ಜಯಂತ ಕಾಯ್ಕಿಣಿ ಅವರ ಕವಿತೆಯಲ್ಲಿರುವ ಭಾವನೆ ಹಾಗೂ ಕೃತಿಗಳಲ್ಲಿರುವ ವಿಶಿಷ್ಟತೆಗಳನ್ನು ತಿಳಿಸಿದರು.

ವಿಜ್ಞಾನ ಪದವೀಧರರಾದ ಶ್ರೀ ಜಯಂತ ಕಾಯ್ಕಿಣಿಯವರು ಕೆಲ ಕಾಲ ಮುಂಬೈನಲ್ಲಿ ವಾಸವಾಗಿದ್ದು ತದನಂತರ ತಮ್ಮ ತಾಯ್ನಾಡಿಗೆ ಮರಳಿ ಬೆಂಗಳೂರಿನಲ್ಲೀಗ ಸಿನೇಮಾ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. 'ಮುಂಗಾರು ಮಳೆ' ಚಲನಚಿತ್ರದ ಸಂಗೀತಕ್ಕೆ ಸಾಹಿತ್ಯ ಬರೆದು ಯಶಸ್ವಿಯಾದ ಹಿನ್ನೆಲೆಯ ಬಗ್ಗೆ ಹೇಳುತ್ತ ತಾಳ, ಲಯಕ್ಕೆ ಸರಿಯಾಗಿ ಹೊಂದಿಸಿ ಶಬ್ದಗಳ ಬಳಕೆ ಮಾಡುತ್ತ ಹಾಡುಗಳನ್ನು ರಚಿಸುವುದು ಬಹಳ ಸವಾಲಿನ ಕೆಲಸ, ಇಲ್ಲಿ ಒತ್ತಕ್ಷರಗಳಿಲ್ಲದ ಸರಳ ಶಬ್ದಗಳನ್ನು ಬಳಸಬೇಕಾಗುತ್ತದೆ ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡರು. ಕುವೆಂಪು, ಕಾರಂತ, ಬೇಂದ್ರೆ, ಹೀಗೆ ಅನೇಕ ಶ್ರೇಷ್ಠ ಸಾಹಿತಿಗಳ ಸಂದರ್ಶನ ಮಾಡಿದಾಗ ಅವರಲ್ಲಿ ಕಂಡ ವಿಶಿಷ್ಟ ದೃಷ್ಟಿಕೋನಗಳನ್ನು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಘದ ಖಜಾಂಚಿ ಶ್ರೀ ಎಂ.ವಿ. ವೆಂಕಟೇಶ್, ಸಂಘವು ನಿರಂತರವಾಗಿ ಕನ್ನಡದ ಸಾಹಿತಿಗಳನ್ನು ಸಂಘಕ್ಕೆ ಬರಮಾಡಿಕೊಂಡು ಗೌರವಿಸುವ ಪದ್ಧತಿಯನ್ನು ಬೆಳೆಸಿಕೊಂಡು ಬಂದಿದೆ. ಶ್ರೀ ಜಯಂತ ಕಾಯ್ಕಿಣಿಯಂತಹ ಹೆಸರಾಂತ ಸಾಹಿತಿಗಳ ಮಧ್ಯೆ ಈ ಸಂಜೆಯೊಂದನ್ನು ನಾವೆಲ್ಲ ಕಳೆಯುತ್ತಿರುವುದು ಸಂಘಕ್ಕೆ ಹೆಮ್ಮೆ ಎಂದರು. ಕಾರ್ಯಕ್ರಮವನ್ನು ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಶ್ರೀನಾಥ್ ಎನ್. ಆರ್. ನಿರೂಪಿಸಿದರು. ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಕೆ.ಎಸ್. ಜಿ. ಶೆಟ್ಟಿ, ಹಾಗೂ ಶ್ರೀ ಅಂಜನೀ ಗೌಡ ಅವರುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಡಾ. ಪುರುಷೋತ್ತಮ ಬಿಳಿಮಲೆ ಮಾತನಾಡುತ್ತಿರುವುದು

■ **ಡಾ. ಸುಮಂಗಲಾದೇವಿ**

# "ಅಬ್ಬಬ್ಬ . . . ಹಬ್ಬವೋ ಹಬ್ಬ" ಸಂಘದಲ್ಲಿ ನಗೆ ಹಬ್ಬ !!!

ಇದಾಗಲೇ ತನ್ನ ನಗೆನಾಟಕಗಳಿಂದ ಕನ್ನಡ ನಾಡಿನಲ್ಲಿ ಮನೆಮಾತಾಗಿರುವ ಬೆಂಗಳೂರಿನ ಗೆಜ್ಜೆಹೆಜ್ಜೆ ರಂಗತಂಡವು ಇದೀಗ ದೆಹಲಿಗೆ ಲಗ್ಗೆ ಇಡಲಿದೆ. 2010ರ ಸೆಪ್ಟೆಂಬರ್ 5ರ ಸಂಜೆ ದೆಹಲಿ ಕನ್ನಡ ಸಂಘದ ವೇದಿಕೆಯಲ್ಲಿ 'ನಗೆ ಹಬ್ಬ'ದ ಸವಿಯೂಟವನ್ನು ಉಣ ಬಡಿಸಲು ಕನ್ನಡದ ಪ್ರಖ್ಯಾತ ಹಾಸ್ಯ ಕಲಾವಿದರಾದ ಬ್ಯಾಂಕ್ ಜನಾರ್ಧನ್, ಜೋ ವಿಷ್ಣುವರ್ಧನ್, ವೈಜನಾಥ್ ಬಿರಾದಾರ್, ಮೈಸೂರು ರಮಾನಂದ್, ರಥಸಪ್ತಮಿ ಅರವಿಂದ್, ಶಿವಕುಮಾರಾರಧ್ಯ, ಜಯಶ್ರೀ, ಜಗನ್ನಾಥರಾವ್ ಇದ್ದು ರಂಗಾಸಕ್ತರತ್ತ ಆರೋಗ್ಯ, ನೆಮ್ಮದಿ ತರುವ ನಗೆಯ ಬಾಂಬ್‌ಗಳನ್ನೇ ಎಸೆಯಲಿದ್ದಾರೆ.

ನಗೆಯ ಮೂಲಕ ಸಾಮಾಜಿಕ ಸಮಸ್ಯೆಗಳತ್ತ 'ರಂಗಾಸಕ್ತರನ್ನು ಕರೆದೊಯ್ಯುವ ಆಶಯ ರಂಗ ತಂಡದ್ದಾಗಿದ್ದು ನಗೆಯನ್ನು ಹಂಚಿ ಎಲ್ಲರನ್ನೂ ಸಂತೃಪ್ತಿಗೊಳಿಸುವುದು. ಈ 'ನಗೆಹಬ್ಬ'ದಲ್ಲಿ ಪ್ರದರ್ಶಿಸಲ್ಪಡುವ ನಾಟಕಗಳೆಂದರೆ, ಅಪ್ಪ-ಮಗ, ಕೂತ್ಕೊಳ್ಳಿ-ನಿಂತ್ಕೊಳ್ಳಿ, ಕುಡಿತಾಯಣ, ಹಾಗ್‌ಸತ್ತ?, ಜೊತೆಗೆ ಮಿಮಿಕ್ರಿಯ ರಂಜನೆ, ಹಾಡುಗಳ ಸಂಭ್ರಮ.

'ಅಪ್ಪ-ಮಗ' ನಾಟಕವು ಚಿನಕುರಳಿ ಸಂಭಾಷಣೆಗಳು ಹಾಗೂ ಅಪಾರ ರಂಗಸಾಧ್ಯತೆಗಳಿಂದ ನಗೆಯ ಬುಗ್ಗೆಯನ್ನೇ ಹರಿಸುತ್ತಿದೆ. ಎಸ್‌ಎಸ್‌ಎಲ್‌ಸಿಯಲ್ಲಿ ಗತಕಾಲದಿಂದ ಡುಂಮ್ಕಿ ಹೊಡೆಯುತ್ತಿರುವ, 'ಪೆದ್ದ' ಎಂದು ಬಿರುದಾಂಕಿತನಾದ ಮಗ ಕೇಳುವ ಪ್ರಶ್ನೆಗಳು ತನ್ನನ್ನು ಜಾಣನೆಂದು ಹಮ್ಮುಬಿಮ್ಮಿನಲ್ಲಿರುವ ಅವನ ಅಪ್ಪನನ್ನು ಕಕ್ಕಾಬಿಕ್ಕಿ ಮಾಡುತ್ತವೆ, 'ಕುತ್ಕೊಳ್ಳಿ-ನಿಂತ್ಕೊಳ್ಳಿ' ನಾಟಕವೂ ಕೂಡ ಕಚಗುಳಿ ಇರುವ, ಕುತೂಹಲಕಾರಿ ಸಂಗತಿಗಳಿಂದ ನಗೆಯ ಲೋಕಕ್ಕೆ ಕರೆದೊಯ್ಯುತ್ತಿದೆ. ಅದನ್ನು ನೋಡಿಯೇ ಸವಿಯಬೇಕು. 'ಕುಡಿತಾಯಣ' ನಾಟಕವು ಹಾಸ್ಯ ನಾಟಕವೇ ಆದರೂ ಎಷ್ಟೋ ಜನರನ್ನು ಮತ್ತೆ ಉತ್ತಮ ಬದುಕಿನ ಹಳಿಗೆ ತಂದು ಸೇರಿಸಿರುವ ನಾಟಕವಾಗಿದೆ. ಇಲ್ಲಿಯ ಕುಡುಕನ ಭಂಡತನ, ಇತರರ ಪರದಾಟ, ಅಬ್ಬಬ್ಬ. . .ನಗೆಯ ಹಬ್ಬ!!! ಹ್ಯಾಗ್‌ಸತ್ತ? ನಾಟಕವು ನಗೆಯನ್ನು ಸಿಂಪಡಿಸುತ್ತಾ ನೋಡುಗರ ಮನಗೆಲ್ಲುತ್ತದೆ. ಕೀಟಲೆ. . .ಕೀಟಲೆ. ಇದು ಇಲ್ಲಿನ ಪಾತ್ರವೊಂದರ ಹುಟ್ಟುಗುಣ. ಅವನು ಸಿಕ್ಕವರನ್ನೆಲ್ಲಾ ಕೀಟಲೆ ಮಾಡುತ್ತಾ ನಗೆಯನ್ನು ದಂಡಿ ದಂಡಿಯಾಗಿ ವಿವರಿಸುತ್ತಾನೆ.

ದೆಹಲಿಯಲ್ಲಿರುವ ಕನ್ನಡಿಗರೆ, ನೀವೂ ಬನ್ನಿ, ನಿಮ್ಮ ಕುಟುಂಬವನ್ನು ಕರೆತನ್ನಿ, ಜೊತೆಗೆ ಕನ್ನಡ ಗೊತ್ತಿರುವ ಗೊತ್ತಿಲ್ಲದಿರುವ ಗೆಳೆಯರನ್ನು ಕರೆತಂದು ಆರೋಗ್ಯವಂತ ಹಾಸ್ಯವನ್ನು ಉಂಡು ಸಂತೃಪ್ತರಾಗಿ.

■ **ವಸಂತ ಶೆಟ್ಟಿ ಬೆಳ್ಳಾರೆ**

## ಮುನ್ನೋಟ

ಆತ್ಮೀಯರೇ,

ತಮಗೆ ನೀಡಿದ ಆಶ್ವಾಸನೆಯಂತೆ, ಬೇಸಿಗೆಯ ರಜಾ ನಂತರ ಕಾರ್ಯಕ್ರಮಗಳ ಆಯೋಜನೆಗೆ ಚಾಲನೆ ನೀಡಿದ್ದು, ಕಳೆದ ತಿಂಗಳನಲ್ಲಿ ನಾಟ್ಯಶ್ರೀ ಕಲಾ ತಂಡ (ರಿ) ಶಿವಮೊಗ್ಗ ಇವರಿಂದ ಯಕ್ಷಗಾನ, ಅಮರ ಜ್ಯೋತಿ ಕಲಾ ಬಳಗ, ರಾಮನಗರ ಇವರಿಂದ ಪೌರಾಣಿಕ ನಾಟಕ "ಶ್ರೀ ಕೃಷ್ಣ ಸಂಧಾನ" ಹಾಗೂ ನಮ್ಮ ಮಿತ್ರರ ತಂಡದಿಂದ 'ನಾ ಸತ್ತಿಲ್ಲ' ಪ್ರಯೋಗಗಳು ಅತ್ಯುತ್ತಮವಾಗಿ ಮೂಡಿ ಬಂದಿವೆ. ಕಾರ್ಯಕ್ರಮಗಳೇ ನಡೆಯುತ್ತಿಲ್ಲವೆಂದು, ಆರೋಪಿಸುತ್ತಿದ್ದ ನನ್ನ ಕೆಲವು ಮಿತ್ರರು, ಈ ಎಲ್ಲಾ ಕಾರ್ಯಕ್ರಮಗಳಲ್ಲಿ, ಕಾಣಿಸದಿದ್ದುದೇ ವಿಪರ್ಯಾಸ.

ಬರುವ ದಿನಗಳಲ್ಲಿ ಉಪೇಂದ್ರ ಅಭಿನಯದ ಕನ್ನಡ ಚಲನಚಿತ್ರ, ಶಿವಧ್ವಜ್ ನಿರ್ದೇಶನದ ತುಳು ಚಲನಚಿತ್ರ, ಸಂಘದ ಅಂಗಳದಲ್ಲಿ ಕಾವ್ಯ, ಜನಪದರು ಸಾಂಸ್ಕೃತಿಕ ವೇದಿಕೆ, ಹೊಸಕೋಟೆ ಇವರಿಂದ 'ಬುಡ್ಗನಾದ' ನಾಟಕ, ಕನ್ನಡ ಚಿತ್ರರಂಗದ ಖ್ಯಾತ ಹಾಸ್ಯ ಕಲಾವಿದರಿಂದ 'ಹಾಸ್ಯ ಸಂಜೆ' ಮುಂತಾದ ಜನಪ್ರಿಯ ಕಾರ್ಯಕ್ರಮಗಳು ಬರುತ್ತಿವೆ, ಜೊತೆಗೆ ಕ್ರಿಕೆಟ್ ಮತ್ತು ಆಟೋಟ ಸ್ಪರ್ಧೆಗಳು ಸಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳಲ್ಲಿ ನಡೆಯಲಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕೆಂದು ಸವಿನಯ ಪ್ರಾರ್ಥನೆ.

■ ಆರ್. ರೇಣುಕುಮಾರ್
ಪ್ರಧಾನ ಕಾರ್ಯದರ್ಶಿ

### ಸಿ.ವಿ. ಗೋಪಿನಾಥ್ ಅವರಿಗೆ 'ಗುರು ಸಮ್ಮಾನ್' ಪ್ರಶಸ್ತಿ



ದೇಶದ ನಾಗರಿಕ ಸೇವೆಗೆ ಆಯ್ಕೆಯಾಗ ಬಯಸುವ ಅಭ್ಯರ್ಥಿಗಳಿಗೆ ತಮ್ಮ ಮಹತ್ವದ ಸೇವಾಭಾವದಿಂದ ತರಬೇತಿ ಮಾಡುತ್ತಿರುವ ಮತ್ತು ಭಾರತದ ಉತ್ತಮ ಮೌಲ್ಯಗಳನ್ನು ಆಧರಿಸಿಕೊಂಡಿರುವ ಶ್ರೀ ಸಿ.ವಿ. ಗೋಪಿನಾಥ್ ಅವರಿಗೆ 'ಗುರು ಸಮ್ಮಾನ್' ವನ್ನು ನೀಡಿ ಗೌರವಿಸಲಾಯಿತು. ದೆಹಲಿಯ ಜನ ಕಲ್ಯಾಣ ಶಿಕ್ಷಣ ಸಮಿತಿಯ ಅಂಗವಾಗಿರುವ ಸಂಕಲ್ಪ ಸಂಸ್ಥೆಯ ಹೃಷಿಕೇಶದ ಡಿವೈನ್ ಲೈಫ್ ಸೊಸೈಟಿಯ ಉಪಾಧ್ಯಕ್ಷರಾದ ಸ್ವಾಮಿ ನಿರ್ಲಿಪ್ತಾನಂದ ಮಹಾರಾಜರ ಉಪಸ್ಥಿತಿಯಲ್ಲಿ ನೀಡಿ ಗೌರವಿಸಲಾಯಿತು. ದೆಹಲಿಯ ಹಂಸ್‌ರಾಜ್ ಕಾಲೇಜಿನ ಸಭಾಂಗಣದಲ್ಲಿ ನಡೆದ ಈ ಸುಂದರ ಸಮಾರಂಭದಲ್ಲಿ ಕೇಂದ್ರದ ಮಾಜಿ ಮಂತ್ರಿ ಶ್ರೀ ಜಗಮೋಹನ್ ಅವರು ಉಪಸ್ಥಿತರಿದ್ದರು.

## ದೇಣಿಗೆ ನೀಡಿ ಸಹಕರಿಸಿ

ದೆಹಲಿ ಕರ್ನಾಟಕ ಸಂಘದಲ್ಲಿ ಸುಮಾರು 60,000 ಕ್ಕೂ ಮಿಕ್ಕಿ ಕನ್ನಡ ಪುಸ್ತಕಗಳಿವೆ. ಗ್ರಂಥಾಲಯದಲ್ಲಿ ಅದನ್ನು ಸರಿಯಾಗಿ ಜೋಪಾನವಾಗಿ ಜೋಡಿಸಿಡಲು ಸುಮಾರು 40 ಕಪಾಟುಗಳ ಅಗತ್ಯವಿದೆ. ಕಪಾಟಿನ ಜೊತೆಗೆ ಕಂಪ್ಯೂಟರೀಕರಣಗೊಳಿಸಲು ಅಂದಾಜು ಮೂರುವರೆ ಲಕ್ಷ ರೂಪಾಯಿಗಳ ಅಗತ್ಯ ಇದೆ. ಇದರಲ್ಲಿ ಈಗಾಗಲೇ ಒಂದು ಲಕ್ಷದ ದೇಣಿಗೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಸಿ.ವಿ. ಗೋಪಿನಾಥ್ ಅವರು ಕೊಡಿಸಿದ್ದಾರೆ. ಕನ್ನಡಾಭಿಮಾನಿಗಳು, ಪುಸ್ತಕಪ್ರೇಮಿಗಳು ಈ ಕೆಲಸವನ್ನು ಪೂರ್ತಿಗೊಳಿಸಲು ಸಹಕಾರ ನೀಡಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತಿದ್ದೇವೆ.

ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಸಭಾಂಗಣ (Conference Hall) ಕ್ಕೆ ಧ್ವನಿವರ್ಧಕ ಹಾಗೂ ಪ್ರೊಜೆಕ್ಟರ್‌ಗಳನ್ನು ಅಳವಡಿಸಲು ಸುಮಾರು 4ಲಕ್ಷ ರೂಪಾಯಿಗಳ ಅಗತ್ಯವಿದೆ. ದಾನಿಗಳು ಈ ಕೆಲಸವನ್ನು ಸಂಪೂರ್ಣಗೊಳಿಸಲು ಸಹಕರಿಸಬೇಕಾಗಿ ಈ ಮೂಲಕ ವಿನಂತಿಸುತ್ತಿದ್ದೇನೆ. ರೂಪಾಯಿ 5000/- ಹೆಚ್ಚು ದೇಣಿಗೆ ನೀಡಿದವರ ಭಾವಚಿತ್ರವನ್ನು ಅಭಿಮತದಲ್ಲಿ ಪ್ರಕಟಿಸಲಾಗುವುದು.

■ ವಸಂತ ಶೆಟ್ಟಿ ಬೆಳ್ಳಾರೆ
ಉಪಾಧ್ಯಕ್ಷರು

## ಬನ್ನಿ, ಜೊತೆಗೂಡಿ ಮುನ್ನಡೆಯೋಣ

ದೆಹಲಿ ಮತ್ತು ದೆಹಲಿಯ ಸುತ್ತಮುತ್ತಲಿರುವ ಕರ್ನಾಟಕದ ಸಂಘ ಸಂಸ್ಥೆಗಳು ಒಂದರಿಂದ ಎರಡು ಗಂಟೆಗಳ ಕಾಲ ಉತ್ತಮ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದಲ್ಲಿ ಕಾರ್ಯಕ್ರಮವನ್ನು ಪ್ರದರ್ಶಿಸಲು ದೆಹಲಿ ಕರ್ನಾಟಕ ಸಂಘವು ಸಭಾಂಗಣದ ಜೊತೆಗೆ ಇತರ ಸಾಧ್ಯವಾದ ಸಹಾಯವನ್ನು ನೀಡಿ ಸಹಕರಿಸುವುದು.

■ ವಸಂತ ಶೆಟ್ಟಿ ಬೆಳ್ಳಾರೆ
ಉಪಾಧ್ಯಕ್ಷರು

## ಉಚಿತ ವೈದ್ಯಕೀಯ ತಪಾಸಣೆ

ಆಗಸ್ಟ್ 29ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿ ವಿನಂತಿ.

■ ಪ್ರಧಾನ ಕಾರ್ಯದರ್ಶಿ

# ಶ್ರೀ ಕೃಷ್ಣ ಸಂಧಾನ - ಪೌರಾಣಿಕ ನಾಟಕ



ಮಹಾಭಾರತದಲ್ಲಿ ಶಕುನಿಯ ಕುತಂತ್ರದಿಂದಾಗಿ ಜೂಜಾಟದಲ್ಲಿ ಪಾಂಡವರನ್ನು ಸೋಲಿಸಿ ಪಂಥದ ಷರತ್ತಿನಂತೆ ವನವಾಸ–ಅಜ್ಞಾತವಾಸಗಳನ್ನು ಮುಗಿಸಿದ ಪಾಂಡವರು ಹಿಂದಿರುಗಿದರು. ತಮಗೆ ನ್ಯಾಯವಾಗಿ ಸಲ್ಲಬೇಕಾದ ಅರ್ಧರಾಜ್ಯಕ್ಕಾಗಿ ಧರ್ಮರಾಯನು ತನ್ನ ಕುಲಪುರೋಹಿತರಾದ ದೌಮ್ಯರನ್ನು ಸಂಧಿಗಾಗಿ ಕಳುಹಿಸುವನು. ಆದರೆ ದುರ್ಯೋಧನನು ಅದಕ್ಕೆ ಸಮ್ಮತಿಸದೇ ಯುದ್ಧವೇ ಪರಿಹಾರವೆಂದು ಘೋಷಿಸಿದನು. ಆನಂತರ ಮಹಾಭಾರತದ ಮಹಾಪುರುಷನಾದ ಶ್ರೀಕೃಷ್ಣನಲ್ಲಿಗೆ ದುರ್ಯೋಧನ ಮತ್ತು ಅರ್ಜುನರು ತೆರಳುವರು.

ಪಾಂಡವರು, ಕೌರವರು ದಾಯಾದಿಗಳಾದ್ದರಿಂದ ಯುದ್ಧವು ಬೇಡ, ಸಂಧಾನ ಮಾಡಿಕೊಂಡು ಶಾಂತಿಯಿಂದ ಬಾಳಿರಿ ಎಂಬ ಶ್ರೀಕೃಷ್ಣನ ಉಪದೇಶವನ್ನು ದುರ್ಯೋಧನನು ತಿರಸ್ಕರಿಸಿದನು. ಆನಂತರ ಪಾಂಡವರೈವರೂ ಸಮಾಲೋಚಿಸಿ ತಮ್ಮ ಪ್ರಿಯ ಬಂಧುವಾದ ಶ್ರೀಕೃಷ್ಣನನ್ನು ಮತ್ತೊಮ್ಮೆ ರಾಯಭಾರಿಯಾಗಿ ಕಳುಹಿಸುವರು.

ಶಕುನಿಯ ಸಲಹೆಯಂತೆ ಸಂಧಿಯನ್ನು ನಿರಾಕರಿಸಿದ ದುರ್ಯೋಧನನು ರಾಜಧರ್ಮವನ್ನು ಮರೆತು ಕೃಷ್ಣನನ್ನು ಬಂಧಿಸಲು ಪ್ರಯತ್ನಿಸುವನು. ಕಪಟ ನಾಟಕ ಸೂತ್ರಧಾರಿಯಾದ ಶ್ರೀಕೃಷ್ಣನು ತನ್ನ ಮಾಯೆಯಿಂದ ಅಲ್ಲಿಂದ ಪಲಾಯನ ಮಾಡುವನು. ಕರ್ಣನ ಜನ್ಮದ ವೃತ್ತಾಂತವನ್ನು ತಿಳಿದ ಶ್ರೀಕೃಷ್ಣನು ಕರ್ಣನನ್ನು ಸಂಧಿಸಿ ಅವನ ಜನ್ಮ ವೃತ್ತಾಂತವನ್ನು ತಿಳಿಸಿ ಕರ್ಣನ ಮನೋಸ್ಥೈರ್ಯವನ್ನು ಕಿತ್ತು ಕುರುಪಾಂಡವರ ಯುದ್ಧದಲ್ಲಿ ಪಾಂಡವರಿಗೆ ಜಯವಾಗುವಂತೆ ಸಹಾಯ ಮಾಡುವನು. ನಂತರ ದುರ್ಯೋಧನನ ರಾಜಸಭೆಯ ವಿಚಾರವನ್ನು ಪಾಂಡವರಿಗೆ ತಿಳಿಸಿ ಯುದ್ಧಕ್ಕೆ ಸಿದ್ಧರಾಗುವಂತೆ ಹೇಳುವನು. ಈ ಕಥಾ ವಸ್ತುವನ್ನು ಒಳಗೊಂಡ "ಶ್ರೀ ಕೃಷ್ಣ ಸಂಧಾನ" ಎನ್ನುವ ಮೂರು ಗಂಟೆಗಳ ಅವಧಿಯ ಈ ಪೌರಾಣಿಕ ನಾಟಕವನ್ನು ಶ್ರೀ ಭೈರೇಗೌಡ ಅವರ ನೇತೃತ್ವದ ಅಮರ ಜ್ಯೋತಿ ಕಲಾ ಬಳಗ ರಾಮನಗರ ಇವರು ಕರ್ನಾಟಕ ಸಂಘದ ಸಭಾಂಗಣದಲ್ಲಿ ದಿನಾಂಕ 31.07.2010ರಂದು ಪ್ರದರ್ಶಿಸಿದರು. ಹಲವು ಸಮಯಗಳ ನಂತರ ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಪೌರಾಣಿಕ ನಾಟಕ ದೆಹಲಿ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಯಿತು.

ಪಾತ್ರ ಪರಿಚಯ : ಶ್ರೀಯುತ ಕೃಷ್ಣರಾಜು ಅವರ ನಿರ್ದೇಶನದಲ್ಲಿ, ಶ್ರೀ ಕೃಷ್ಣನಾಗಿ : ಬಿ.ಜಿ. ಗುರುಮಲ್ಲಯ್ಯ, ಧರ್ಮರಾಯನಾಗಿ : ಭೈರೇಗೌಡ, ಭೀಮನಾಗಿ : ಶಿವಪ್ರಸಾದ್ ಎಲ್., ಅರ್ಜುನನಾಗಿ : ಆರ್.ಕೆ. ಬೈರಲಿಂಗಯ್ಯ, ಕರ್ಣನಾಗಿ : ವಿಜಯಕುಮಾರ್, ದುರ್ಯೋಧನನಾಗಿ : ತಿಮ್ಮರಾಜು, ದುಶ್ಯಾಸನನಾಗಿ : ಸುಮತಿಕುಮಾರ್ ಜೈನ್, ಶಕುನಿಯಾಗಿ : ನಾರಾಯಣ ಟಿ., ವಿದುರನಾಗಿ : ವಿ.ಸಿ. ವಾಸು, ಅಭಿಮನ್ಯುವಾಗಿ : ಸಿ. ರವಿ, ಭೀಷ್ಮನಾಗಿ : ಕೃಷ್ಣಪ್ಪ, ದ್ರೋಣನಾಗಿ : ಚಂದ್ರು, ಸಿಂಧೂರಾಜನಾಗಿ : ಚಿನ್ನಗಿರಿಗೌಡ, ರುಕ್ಮಿಣಿ–ಉತ್ತರೆಯಾಗಿ : ಹೇಮಲತಾ, ದ್ರೌಪದಿ–ಕುಂತಿಯಾಗಿ : ಭಾಗ್ಯಶ್ರೀ ಅವರು ಅಭಿನಯಿಸಿದರು.

ನಾಟಕಕ್ಕೆ ಹಾರ್ಮೋನಿಯಂ : ಕೃಷ್ಣರಾಜು, ವರ್ಣಾಲಂಕಾರ ಮತ್ತು ವಸ್ತ್ರಾಲಂಕಾರ : ರವಿ ಮತ್ತು ಸಂಗಡಿಗರು, ವಾದ್ಯಗೋಷ್ಠಿ : ಕ್ಯಾಸಿಯೋ : ರಂಗನಾಥ್, ತಬಲ : ನಟರಾಜ್ ಮತ್ತು ಸಂಗಡಿಗರು ಸಹಕರಿಸಿದರು.

■ ವಸಂತ ಶೆಟ್ಟಿ ಬೆಳ್ಳಾರೆ



ಹಾಸ್ಯ-ಲೇಖನ

# ಕೋಮನ್‌ವೆಲ್ತ್ ಗೇಮ್ಸ್ ತಯಾರಿ ಹಾಗೂ ನಮ್ಮ ಅಡಿಗೆ ಮನೆ ರಿಪೇರಿ

ಡೆಲ್ಲಿಯಲ್ಲಿ ಏನು ಮಾಡಲು ಹೋದರೂ ಅದೊಂದು ಕಥೆಯಾಗಿ ಬಿಡುತ್ತದೆ. ಕೋಮನ್ ವೆಲ್ತ್ ಗೇಮ್ಸ್‌ನ ತಯಾರಿಯನ್ನೇ ತೆಗೆದುಕೊಳ್ಳಿ. ದಿನ ಬೆಳಗಾದರೆ ಪತ್ರಿಕೆಗಳು ಸುದ್ದಿ ಚಾನೆಲ್‌ಗಳ ತುಂಬೆಲ್ಲಾ ಅದರದೆ ಕಥೆ. ಕೋಮನ್‌ವೆಲ್ತ್ ಗೇಮ್ಸ್ ನಡೆಯುವುದೋ ಇಲ್ಲವೋ ತಯಾರಿ ಇನ್ನೂ ಆಗಿಲ್ಲ. ಆಟದ ಮೈದಾನಗಳು, ರಸ್ತೆ, ಬರುವ ವಿದೇಶಿ ಕ್ರೀಡಾಪಟುಗಳಿಗೆ ಊಟ, ವಸತಿ ಹೀಗೆ ಹತ್ತು ಹಲವಾರು ತಯಾರಿಗಳು ಆಗಬೇಕಾಗಿದೆ. ಕೆಲಸ ಭರದಿಂದ ಸಾಗಿದೆ. ಒಂದು ಗಂಟೆಯ ಮಳೆ ಡೆಲ್ಲಿಯಲ್ಲಿ ಅಲ್ಲೋಲ ಕಲ್ಲೋಲ ಉಂಟು ಮಾಡಿದೆ. ಕೋಮನ್ ವೆಲ್ತ್ ಗೇಮ್ಸ್‌ನ ಹೆಸರಿನಲ್ಲಿ 40 ಸಾವಿರ ಕೋಟಿ ರೂಪಾಯಿ ಖರ್ಚಾಗುತ್ತಿದೆ. ಇಡೀ ಡೆಲ್ಲಿಯನ್ನು ಅಗೆದು ಹಾಕಲಾಗಿದೆ. ಇದೊಂದು ರೋಚಕ ಕಥೆಯಾದರೆ ನಮ್ಮ ಮನೆಯ ಅಡಿಗೆ ಮನೆ ರಿಪೇರಿಯ ಕತೆ ಕೇಳಿ. ಸುಮಾರು 4–5 ವರ್ಷಗಳಿಂದ ಮಾಡಬೇಕೆಂದುಕೊಂಡಿದ್ದ ಅಡಿಗೆ ಮನೆ ರಿಪೇರಿ ಶುರುವಾದದ್ದು ಹೀಗೆ. ಅದೊಂದು ದಿನ ಬೆಳಿಗ್ಗೆ ನನ್ನ ಮನೆಯಾಕೆ ನನ್ನ ಬಳಿ ಬಂದು 'ಏನ್ರಿ ನಮ್ಮ ಅಡಿಗೆ ಮನೆ ರಿಪೇರಿ ಮಾಡುವ ಮಾತು ನೀವು ಮರೆತೇ ಬಿಟ್ಟಿರುವ ಹಾಗಿದೆ' ಎಂದು ಪೀಠಿಕೆ ಹಾಡಿದಳು. "ಇಲ್ಲ ಇಲ್ಲ ಹಾಗೇನಿಲ್ಲ ಮಾರ್‍ರ್‍ಯಾತಿ ಅಗತ್ಯ ಮಾಡೋಣ" ಎಂದೆ. ಅಷ್ಟು ಹೇಳಿದ್ದೇ ಸಾಕು. ಅವಳು ಮುಂದುವರಿಸಿಯೇ ಬಿಟ್ಟಳು. ನೋಡಿ ನಿನ್ನೆ ನನ್ನ ಆಪ್ತ ಗೆಳತಿ ಉಮಾ, ಒಬ್ಬ ಕಾಂಟ್ರಾಕ್ಟರನ್ನು ಕರೆದುಕೊಂಡು ಬಂದಿದ್ದಳು. ಅವನೊಬ್ಬ ಒಳ್ಳೆ ಕೆಲಸ ಮಾಡಿಸುವ ಕಾಂಟ್ರಾಕ್ಟರ್ ಅಂತ ಅಂದಳು. ತನ್ನ ಆಪ್ತ ಸ್ನೇಹಿತೆ ಉಮಾ, ಏನು ಹೇಳಿದರೂ ಅದನ್ನು ವೇದವಾಕ್ಯದಂತೆ ಪಾಲಿಸುವ ನನ್ನ ಪತ್ನಿಯ ಸ್ವಭಾವವನ್ನು ಅರಿತ ನಾನು ಯಾವ ಸಂಕೋಚವಿಲ್ಲದೆ ಹಿಂದೆ ಮುಂದೆ ನೋಡದೆ ಹೂಂ ಎಂದೆ. ಏಕೆಂದರೆ ನನ್ನವಳಿಗೆ ಅವಳ ಗೆಳತಿ ಉಮಾ ನನಗಿಂತ ಹೆಚ್ಚು. ಒಂದು ವೇಳೆ ಉಮಾ (ದೇವಿ) ನನ್ನ ಹೆಂಡತಿಯ ಕಿವಿಯಲ್ಲಿ ಪಿಸು ಧ್ವನಿಯಲ್ಲಿಯಾದರೂ ಸಾಕು, ಏನಾದರೂ ಒಂದು ಮಾತು ಉಸಿರಿದರೆ ಅದನ್ನು ಈಕೆ ಚಾಚೂ ತಪ್ಪದೆ ಪಾಲಿಸಿಯೇ ತೀರುತ್ತಾಳೆ. ನಾನು ಎಷ್ಟೋ ಬಾರಿ ತಮಾಷೆಗಾಗಿ ನನ್ನವಳಿಗೆ ಹೇಳುವುದುಂಟು. "ಉಮಾ ನಿನಗೆ ಈ ನಾಲ್ಕನೇ ಮಾಡಿಯ ತಾರಸಿಯಿಂದ ಹಾರು ಎಂದರೆ ನೀನು ಹಾರಿಯೇ ಬಿಡುತ್ತಿ". ಒಂದು ವೇಳೆ, ಆಕೆ ಏನಾದರೂ "ನಿನ್ನ ಗಂಡ ಸರಿ ಇಲ್ಲ, ಅವನನ್ನು ಬಿಡು" ಅಂದರೆ ನನ್ನ ಗತಿ ಏನು ಎಂದು ಎಣಿಸಿ ಭಯವಾಗುತ್ತದೆ. ಹಾಗಾಗಿ ಉಮಾಳ ಸಿಪಾರಸ್ಸಿನಿಂದ ಬಂದ ಆ ಕಾಂಟ್ರಾಕ್ಟರ್‌ಗೆ ನಮ್ಮ ಅಡಿಗೆ ಮನೆ ಒಪ್ಪಿಸಿದೆವು. "ಸಾರ್, ಕೇವಲ ಎಂಟೇ ಎಂಟು ದಿವಸಗಳಲ್ಲಿ ನಿಮ್ಮ ಎಲ್ಲಾ ಕೆಲಸ ಮುಗಿಸಿ ವತ್ರೆ ಮಾಡಿಕೊಡುತ್ತೇನೆ" ಎಂದು ಬೇರೆ ಆಶ್ವಾಸನೆ ಕೊಟ್ಟು ಬಿಟ್ಟ. ಕೋಮನ್ ವೆಲ್ತ್ ಗೇಮ್ಸ್‌ನ ತಯಾರಿಯ ಡೆಡ್‌ಲೈನ್ ಹಾಗೆ. ಆದರೆ ಇಂದಿಗೆ 37 ದಿವಸಗಳಾದವು. ನಮ್ಮ ಅಡಿಗೆ ಮನೆ ಅಗೆದು ಬಿದ್ದಿದೆ. ಸ್ವಲ್ಪ ಮಣ್ಣು, ಹೊಯಿಗೆ, ಇಟ್ಟಿಗೆ, ಒಂದು ಅರ್ಧ ಚೀಲ ಸಿಮೆಂಟು, ಕೆಲವು ಟೈಲ್ಸ್‌ಗಳು ಅಲ್ಲಲ್ಲಿ ಹರಡಿವೆ. ನಾವು ನಮ್ಮ ಇನ್ನೊಂದು ಕೋಣೆಯಲ್ಲಿ ಬ್ರೆಡ್ಡು, ಬಾಳೆಹಣ್ಣು ಹೀಗೆ ಫಲಹಾರ ಒಣ ಆಹಾರ ತಿಂದು ಜೀವನ ನಡೆಸುತ್ತಿದ್ದೇವೆ. ಉಮಾ ಆಗಾಗ್ಗೆ ಬಂದು ಸುಪರ್‌ವೈಸ್ ಮಾಡಿ ಹೋಗುತ್ತಾಳೆ. ಕೋಮನ್‌ವೆಲ್ತ್ ಗೇಮ್ಸ್‌ನ ತಯಾರಿ ಅಂತ ಹೊಸ ದಿನಾಂಕಗಳು ಡೆಡ್ ಲೈನ್‌ಗಳನ್ನು ಈ ಕಾಂಟ್ರಾಕ್ಟರ್ ಮಹಾಶಯ ಕೊಡುತ್ತಲೇ ಇದ್ದಾನೆ. ನಮ್ಮ ಪೈಪ್ ಗ್ಯಾಸ್ ಬಂದಾಗಿ ಬಿದ್ದಿದೆ. ಸಿಂಕ್ ಬೋರಲು ಬಿದ್ದಿದೆ. ಎಲ್ಲಾ ನಳ್ಳಿಗಳು ಬಂದಾಗಿದ್ದರೂ ಒಮ್ಮೊಮ್ಮೆ ಒಂದೊಂದು ಬೊಟ್ಟು ನೀರು ಅಸರಿ ತಮ್ಮ ಜೀವಂತಿಕೆಯನ್ನು ಅರಿವು ಮಾಡಿಕೊಡುತ್ತದೆ. ಒಂದು ದಿನ ಬಂದ ಮೇಸ್ತ್ರಿ ಮಾರನೆ ದಿನ ಬರುವುದಿಲ್ಲ. ಎರಡು ಟೈಲ್ ಅಂಟಿಸಿ ಇಟ್ಟು ಟೀ ಕುಡಿಯಲು ಹೋದವ ಮರಳಿ ಬರಲೇ ಇಲ್ಲ. ಪ್ಲಂಬರ್ ನಳ್ಳಿ ಭದ್ರವಾಗಿ ಬಿಗಿದಿಟ್ಟು ಹೋಗಿಬಿಟ್ಟ. ಎಲೆಕ್ಟ್ರೀಷಿಯನ್ ವಯರೆಲ್ಲಾ ಕಿತ್ತು ಹಾಕಿ ಪವರ್ ಡಿಸ್‌ಕನೆಕ್ಟ್ ಮಾಡಿ ಹೋಗಿ ಬಿಟ್ಟಿದ್ದಾನೆ. ಕಾಂಟ್ರಾಕ್ಟರ್ ಆಗೊಮ್ಮೆ ಈಗೊಮ್ಮೆ ಬಂದು ಯಾರೂ ಸರಿಯಾಗಿ ಕೆಲಸ ಮಾಡುವವರು ಸಿಕ್ಕುತ್ತಿಲ್ಲ ಎಂದು ತನ್ನ ಅಳಲು ತೋಡಿಕೊಂಡು ಹೋಗುತ್ತಾನೆ. ನನ್ನ ಅಕೌಂಟ್‌ನಿಂದ ತೆಗೆದು ಎಣಿಸಿಕೊಟ್ಟ ಹದಿನೈದು ಸಾವಿರ ರೂಪಾಯಿ ಅಡ್ವಾನ್ಸ್ ನನಗೆ ಆಗಾಗ್ಗೆ ಬ್ಲಡ್ ಪ್ರೆಷರ್ ಹೆಚ್ಚಾಗಿಸುತ್ತದೆ. ಆದರೆ, ದೇಶದ ಮರ್ಯಾದೆಗಾಗಿ ಕೋಮನ್‌ವೆಲ್ತ್ ಗೇಮ್ಸ್‌ನ ಎಲ್ಲಾ ತಯಾರಿ ಸರಿಯಾಗಿ ನಡೆಯುತ್ತಲೇ ಇದೆ ಎಂದು ಹೇಳಿಕೊಳ್ಳುವ ನಮ್ಮ ನಾಯಕರಂತೆ ನಾನು ನನ್ನ ಮನೆ ಮರ್ಯಾದೆ, ಮನೆಯಾಕೆಯ ಆಪ್ತ ಸ್ನೇಹಿತೆಯ ಗೌರವಕ್ಕಾಗಿ (ಎಲ್ಲಕ್ಕೂ ಮಿಗಿಲಾಗಿ ನನ್ನ ಜೀವ ರಕ್ಷಣೆಗಾಗಿ) ಒಣ ನಗೆ ಮುಖದ ಮೇಲೆ ತೋರಿಸುತ್ತಾ ನಮ್ಮ ಅಡುಗೆ ಮನೆ ರಿಪೇರಿ ಭರದಿಂದ ಸಾಗಿದೆ ಎಂದು ಹೇಳುತ್ತಾ ಬರುತ್ತಿದ್ದೇನೆ. ಬಹುಶಃ ಕೋಮನ್ ವೆಲ್ತ್ ಗೇಮ್ಸ್‌ನಂತೆ ಒಂದು ದಿನ ನಮ್ಮ ಅಡುಗೆ ಮನೆಯೂ ತಯಾರಾಗಲಿದೆ ಎಂಬ ಆಶಯದೊಂದಿಗೆ ನೀವು ಈ ಮಾತನ್ನು ನನ್ನವಳಿಗೆ ತಿಳಿಸುವುದಿಲ್ಲ ಎಂಬ ನಂಬಿಗೆಯಿಂದ ನಿಮ್ಮಲ್ಲಿ ಕೊರೆಯುವುದನ್ನು ನಿಲ್ಲಿಸುತ್ತೇನೆ. (ಏಕೆಂದರೆ ಅವಳಿಗೆ ಕನ್ನಡ ಓದಲು ಬರುವುದಿಲ್ಲ)

■ ಸಖಾರಾಮ ಉಪ್ಪೂರು


R.V. Printing Press

A HOUSE OF QUALITY PRINTING

C-95, Okhla Industrial Area, Phase-I,
New Delhi - 110 020
Phone : 26815778, 41611143
Mobile : 9811104398, 9811604398
e-mail : rvprintingpress@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

ಆರ್.ವಿ. ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್


ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

ಮುಖಪುಟ ಲೇಖನ

# ದೆಹಲಿಯ ಅಪೂರ್ವ

## ಶ್ರೀನಿವಾಸ ಮಲ್ಯ ಮೆಮೋರಿಯಲ್


ತೊಗಲು ಗೊಂಬೆಯಾಟದ ಹನುಮಂತ

ಇಂಡಿಯಾ ಗೇಟ್ ನಿಂದ ಐ ಟಿ ಓ ದ ಕಡೆ ಹೋಗುತ್ತಿದ್ದಾಗ ಸಿಗುವ ಕೆಂಪು ದೀಪದ ಸನಿಹ ಎಡಕ್ಕೆ ತಿರುಗಿದರೆ ದೀನ ದಯಾಳ ಉಪಾಧ್ಯಾಯ ಮಾರ್ಗ ದೊರಕುತ್ತದೆ. ಈ ಮಾರ್ಗದಲ್ಲಿ ಸ್ವಲ್ಪ ಮುಂದೆ ಹೋದರೆ ಬಲ ಬದಿಗೆ ಸಿಗುವ 5ನೇ ನಂಬರಿನ ಮನೆಯೇ ಶ್ರೀನಿವಾಸ ಮಲ್ಯ ಮೆಮೋರಿಯಲ್ ಥಿಯೇಟರ್ ಕ್ರಾಫ್ಟ್ ಮ್ಯೂಸಿಯಂ. ಕನ್ನಡಿಗರೊಬ್ಬರ ಹೆಸರಿನಲ್ಲಿರುವ ಈ ವಸ್ತು ಸಂಗ್ರಹಾಲಯವನ್ನು ಕಟ್ಟಿ ಬೆಳೆಸಿದವರು ಇನ್ನೊಬ್ಬ ಕನ್ನಡಿಗರಾದ ಕಮಲಾದೇವಿ ಚಟ್ಟೋಪಾಧ್ಯಾಯರು.

ಉಳ್ಳಾಲ ಶ್ರೀನಿವಾಸ ಮಲ್ಯರು (ಜನನ: ನವೆಂಬರ 21, 1902, ಮರಣ ಜನವರಿ 19, 1965), ಆಧುನಿಕ ದಕ್ಷಿಣ ಕನ್ನಡ ಜಿಲ್ಲೆಯ ನಿರ್ಮಾತೃ. 18 ವರ್ಷಗಳ ಕಾಲ (1945–1965) ಸಂಸದರಾಗಿದ್ದ ಅವರು ಕರಾವಳಿ ಜಿಲ್ಲೆಗಳನ್ನು ದೇಶದ ಇತರ ಭಾಗಗಳೊಂದಿಗೆ ಜೋಡಿಸಿದ ಬಹುದೊಡ್ಡ ಯೋಜನೆಗಳನ್ನು ಜಾರಿಗೆ ತಂದ ಮಹಾ ಮುತ್ಸದ್ದಿಯಾಗಿದ್ದರು. ರಾಷ್ಟ್ರೀಯ ಹೆದ್ದಾರಿಗಳಾದ 17 (ಮುಂಬೈ–ಕೊಚ್ಚಿ) ಮತ್ತು 48 (ಮಂಗಳೂರು–ಬೆಂಗಳೂರು) ಅವರ ಯೋಜನೆಗಳು. ನೇತ್ರಾವತಿ ನದಿಗೆ ಉಳ್ಳಾಲದಲ್ಲಿ ಸೇತುವೆ ನಿರ್ಮಿಸಿದವರೂ ಅವರೆ. ನವಮಂಗಳೂರು ಬಂದರು ನಿರ್ಮಾಣದಲ್ಲಿಯೂ ಅವರ ಕೊಡುಗೆಯಿದೆ. ಇಂದು ಪ್ರಖ್ಯಾತವಾಗಿರುವ ಸುರತ್ಕಲ್ ಇಂಜಿನೀಯರ್ ಕಾಲೇಜನ್ನೂ ಕರಾವಳಿಗೆ ತಂದವರು ಅವರೆ. ಮಂಗಳೂರು ಪುರಭವನ, ಬಜ್ಪೆ ವಿಮಾನ ನಿಲ್ದಾಣ, ಮಂಗಳೂರು ಆಕಾಶವಾಣಿ ಹೀಗೆ ಮಲ್ಯರ ಕೊಡುಗೆ ಅಪಾರ.

18ನೇ ವರ್ಷದಲ್ಲಿ ಕಾಲೇಜು ತೊರೆದು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ ಶ್ರೀನಿವಾಸ ಮಲ್ಯರು ಮುಂದೆ ಎಲ್ಲವನ್ನೂ ತೊರೆದು ಗಾಂಧಿ ಅನುಯಾಯಿಗಳಾದರು. ಸ್ವಾತಂತ್ರ್ಯ ದೊರಕುವ ಹೊತ್ತಿಗೆ ನೆಹರೂ ಅವರಿಗೆ ಹತ್ತಿರವಾಗಿದ್ದ ಅವರ ಯೋಚನೆಗಳು ನೆಹರೂ ಅವರಿಗೆ ಆಪ್ತವಾಗಿತ್ತು. 1951 ರ ಹೊತ್ತಿಗೆ ಅವರು ಇನ್ನೊಬ್ಬ ಮಂಗಳೂರಿಗರಾಗಿದ್ದ ಕಮಲಾದೇವಿ ಚಟ್ಟೋಪಾಧ್ಯಾಯರಿ ಗೂ ಆಪ್ತರಾಗಿದ್ದರು. ಕಲೆ, ಸಾಹಿತ್ಯ,, ಸಂಗೀತಗಳಲ್ಲಿ ಸಮಾನ ಆಸಕ್ತಿ ಹೊಂದಿದ್ದ ಅವರಿಬ್ಬರೂ ನಾಡಿನ ಕಲಾ ಸಂರಕ್ಷಣಾ ಕೆಲಸಗಳಲ್ಲಿ ಜೊತೆ ಜೊತೆ ಯಾಗಿ ಕೆಲಸ ಮಾಡಿದರು.


ಕಮಲಾದೇವಿ ಚಟ್ಟೋಪಾಧ್ಯಾಯರೂ ಕೂಡಾ ಮಂಗಳೂರಿನವರೇ. (ಜನನ ಎಪ್ರಿಲ್ 3, 1903, ಮರಣ ಅಕ್ಟೋಬರ 29, 1988). 14 ನೇ ವರ್ಷದಲ್ಲಿ ಅವರಿಗೆ ಕೃಷ್ಣ ರಾವ್ ಅವರೊಂದಿಗೆ ಮದುವೆಯಾದರೂ 16ನೇ ವರ್ಷಕ್ಕೆ ಅವರು ವಿಧವೆಯಾದರು. ಸಂಪ್ರದಾಯದ ಗಡಿರೇಖೆಗಳನ್ನು ದಾಟಿ ನಿಂತ ಅವರು ಮುಂದೆ ಮದರಾಸಿನಲ್ಲಿ ಓದುತ್ತಿದ್ದಾಗ ಪರಿಚಯವಾದ ಹರೀಂದ್ರನಾಥ ಚಟ್ಟೋಪಾಧ್ಯಾಯರನ್ನು ಮದುವೆಯಾದರು. ಹೀಗಾಗಿ ಅವರ ಹೆಸರಿಗೆ 'ಚಟ್ಟೋಪಾಧ್ಯಾಯ' ಸೇರಿಕೊಂಡಿತು. ನಮಗೆಲ್ಲ ತಿಳಿದ ಹಾಗೇ ಕಮಲಾದೇವಿಯಯವರು ಕೂಡಾ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಸಾಮಾಜಿಕ ಕಾರ್ಯಕರ್ತೆ. ಭಾರತೀಯ ಕರಕುಶಲ ಕಲೆಗಳ ಸಂರಕ್ಷಣೆಗೆ ಸಂಬಂಧಿಸಿದ ಹಾಗೆ ಅವರು ಮಾಡಿದ ಕೆಲಸಗಳು ಚಾರಿತ್ರಿಕವಾದುವು. ಇಂದು ಪ್ರಖ್ಯಾತವಾಗಿರುವ, ರಾಷ್ಟ್ರೀಯ ನಾಟಕ ಶಾಲೆ (ಎನ್ ಎಸ್ ಡಿ), ಸಂಗೀತ ನಾಟಕ ಅಕಾಡೆಮಿ, ಸೆಂಟ್ರಲ್ ಕಾಟೇಜ್ ಇಂಡಸ್ಟ್ರೀಸ್ ಎಂಪೋರಿಯಮ್, ಕ್ರಾಫ್ಟ್ ಕೌನ್ಸಿಲ್ ಇಂಡಿಯಾ ಗಳನ್ನು ಕಮಲಾದೇವಿ ಅವರೇ ಸ್ಥಾಪಿಸಿದರು. ಕಮಲಾದೇವಿ ಅವರು ಅಧ್ಯಕ್ಷರಾಗಿದ್ದ 'ಇಂಡಿಯನ್ ನ್ಯಾಶನಲ್ ಥಿಯೇಟರ್ ಮೇ 5, 1944 ರಂದು ಅಸ್ತಿತ್ವಕ್ಕೆ ಬಂತು. 1949ರಲ್ಲಿ ಅವರು ಭಾರತೀಯ ನಾಟ್ಯ ಸಂಘವನ್ನು ಹುಟ್ಟು ಹಾಕಿದರು. ಈ ಸಂಘವನ್ನು ಯುನೆಸ್ಕೊ ಅಫಿಲಿಯೇಟ್ ಮಾಡಿಕೊಂಡಿತು. ಉಳ್ಳಾಲ ಶ್ರೀನಿವಾಸ ಮಲ್ಯರು ಭಾರತೀಯ ನಾಟ್ಯ ಸಂಘದ ಏಳಿಗೆಗಾಗಿ ದುಡಿದರು. 1965ರ ದಶಂಬರದಲ್ಲಿ ಮಲ್ಯರು ದೆಹಲಿಯಲ್ಲಿ ತೀರಿಕೊಂಡಾಗ, ಅವರ ಅಭಿಮಾನಿಗಳೆಲ್ಲ ಸೇರಿ ' ಶ್ರೀನಿವಾಸ ಮಲ್ಯ ಮೆಮೋರಿಯಲ್ ಕಮಿಟಿ' ಯೊಂದನ್ನು ಹುಟ್ಟುಹಾಕಿದರು. ಈ ಕಮಿಟಿಯು ಮುಂದೆ ' ಶ್ರೀನಿವಾಸ ಮಲ್ಯ ಮೆಮೋರಿಯಲ್ ಥಿಯೇಟರ್ ಕ್ರಾಫ್ಟ್ ಟ್ರಸ್ಟ್ ' ನ್ನು ಸ್ಥಾಪಿಸಿ ಈ ಕೆಳಗಿನ ಕೆಲಸಗಳನ್ನು ಮಾಡಲು ಉದ್ದೇಶಿಸಿತು–

1. ಶ್ರೀನಿವಾಸ ಮಲ್ಯ ಮೆಮೋರಿಯಲ್ ಥಿಯೇಟರ್ ಕ್ರಾಫ್ಟ್ ಮ್ಯೂಸಿಯಂನ್ನು ಸ್ಥಾಪಿಸಿ ಕಲಾಸಂರಕ್ಷಣೆಗೆ ಕೆಲಸಮಾಡುವುದು.
2. ದೇಶದ ಎಲ್ಲೆಡೆಗಳಲ್ಲಿ ಥಿಯೇಟರ್ ಚಟುವಟಿಕೆಗಳನ್ನು ನಡೆಸುವುದು
3. ಥಿಯೇಟರ್ ಗೆ ಸಂಬಂಧಿಸಿದಂತೆ ಸಂಶೋಧನೆ ಮತ್ತಿತರ ಚಟುವಟಿಕೆಗಳನ್ನು ನಡೆಸುವುದು.

ಈ ಥಿಯೇಟರ್ ಕ್ರಾಫ್ಟ್ ಮ್ಯೂಸಿಯಂ ಸ್ಥಾಪನೆ ಯಾಗುತ್ತಿದ್ದಂತೆ ಕಮಲಾದೇವಿ ಚಟ್ಟೋಪಾಧ್ಯಾಯರು ತಾವು ಅಧ್ಯಕ್ಷರಾಗಿದ್ದ 'ಭಾರತೀಯ ನಾಟ್ಯ ಸಂಘದ ಸಂಗ್ರಹಗಳನ್ನೆಲ್ಲ ಅದಕ್ಕೆ ದಾನ ಮಾಡಿದರು. ಇಂದು ಮ್ಯೂಸಿಯಂನಲ್ಲಿ ಇರುವ ಅಪೂರ್ವ ವಸ್ತುಗಳೆಲ್ಲ ಹೀಗೆ ಕಮಲಾ ದೇವಿ ಅವರಿಂದ ಕೊಡುಗೆಯಾಗಿ ಬಂದಿರುವಂತಹದು.


**ಮ್ಯೂಸಿಯಂನಲ್ಲಿ ಇರುವ ವಸ್ತುಗಳು:**

ಕಮಲಾದೇವಿ ಅವರು ಮೂಲತಃ ಮಂಗಳೂರಿನವರಾದ್ದರಿಂದ ಅವರ ಸಂಗ್ರಹದಲ್ಲಿ ಕರಾವಳಿಗೆ ಸಂಬಂಧಿಸಿದ ಅನೇಕ ವಸ್ತುಗಳಿವೆ. ಬಯಲಾಟದ ಪರಂಪರೆಯ ವಿವಿಧ ಪ್ರಕಾರಗಳಾದ ತೆಂಕುತಿಟ್ಟು ಹಾಗೂ ಬಡಗು ತಿಟ್ಟು ಗಳ ಪೂರ್ಣ ಪ್ರಮಾಣದ ವೇಷಗಳನ್ನು ಅಲ್ಲಿ ನೋಡಬಹುದಾಗಿದೆ. ಜೊತೆಗೆ, ದೊಡ್ಡಾಟ ಹಾಗೂ ಮೂಡಲಪಾಯಕ್ಕೆ ಸಂಬಂಧಿಸಿದ ಆಭರಣಗಳು, ಹಾಗೂ ವೇಷ ಭೂಷಣಗಳಿವೆ. ಆಂಧ್ರ ಪ್ರದೇಶದ ಯಕ್ಷಗಾನದ ಕೆಲವು ಪ್ರತಿಕೃತಿಗಳಿವೆ. ಕೇರಳದ ಕಥಕ್ಕಳಿ, ಕುಟಿಯಾಟ್ಟಂ, ಕೃಷ್ಣಾಟ್ಟಂ, ಓಟ್ಟಂತುಳ್ಳಲ್, ಮತ್ತು ಮೋಹಿನಿಯಾಟ್ಟಂ ಗೆ ಸಂಬಂಧಿಸಿದ ಅನೇಕ ವಸ್ತುಗಳಿವೆ. ತಮಿಳುನಾಡಿನ ತೆರುಕೂತ್ತು, ವಾರಣಾಸಿಯ ರಾಮ ಲೀಲಾ, ಮಥುರಾದ ರಾಸಲೀಲಾ, ಬಂಗಾಳದ ಚಾವು, ಜಾತ್ರಾ,



ಯಕ್ಷಗಾನ ಕಿರೀಟ

# ವಸ್ತು ಸಂಗ್ರಹಾಲಯ

## ಥಿಯೇಟರ್ ಕ್ರಾಫ್ಟ್ ಮ್ಯೂಸಿಯಂ



ಭೂತದ ವೇಷಭೂಷಣ



ಒರಿಸ್ಸಾದ ಸಾಹಿಜಾತ್ರೆಯ ಮುಖವಾಡ

ನೌಟಂಕಿ, ಕಾಶ್ಮೀರದ ಭಾಂಡ್ ಪಾಥರ್, ಹರ್‍ಯಾಣದ ಸ್ವಾಂಗ, ರಾಜಸ್ಥಾನದ ಖ್ಯಾಲ, ಒರಿಸ್ಸಾದ 'ಒಡಿಸ್ಸಿ', ಹಾಗೂ ಮಧ್ಯಪ್ರದೇಶದ ಮಾಛಕ್ಕೆ ಸಂಬಧಿಸಿದ ಅನೇಕ ವಸ್ತುಗಳು ಇಲ್ಲಿದ್ದು ವಸ್ತು ಸಂಗ್ರಹಾಲಯದ ಮಹತ್ವವನ್ನು ಹೆಚ್ಚಿಸಿವೆ. ಭಾರತ ದೇಶದ ವಿವಿಧ ಭಾಗಗಳ ರಂಗಭೂಮಿಗೆ ಸಂಬಂಧಿಸಿದ ಮಾಹಿತಿಗಳು ದೊರೆಯುವಷ್ಟು ಬೇರೆಲ್ಲೂ ದೊರೆಯುವುದಿಲ್ಲ.

ಕರಾವಳಿ ಭಾಗದ ಬೊಂಬೆಯಾಟಕ್ಕೆ ಅಂತಾರಾಷ್ಟ್ರೀಯ ಮನ್ನಣೆ ತಂದಿತ್ತ ಕಮಲಾದೇವಿಯವರು ಆ ಕಾಲದಲ್ಲಿ ಸಂಗ್ರಹಿಸಿದ ಅಪೂರ್ವ ಯಕ್ಷಗಾನ ಹಾಗೂ ತೊಗಲು ಬೊಂಬೆಗಳು ಇಲ್ಲಿವೆ. ಜೊತೆಗೆ, ರಾಜಸ್ಥಾನದ ಕಟ್ ಪುತ್ಲಿ, ಒರಿಸ್ಸಾದ ಗೋಪಲೀಲಾ, ಆಂಧ್ರದ 'ಬೊಮ್ಮಲಾಟಂ, ಕೇರಳದ ಪಾವಕಥಕಳಿ, ವಳ್ಳಿ ತಿರುಮಾನಂ, ಬಂಗಾಳದ ದಾಂಗೇರ್ ಪುತುಲ್, ಬೊಂಬೆಗಳನ್ನೂ ಇಲ್ಲಿ ಕಾಣಬಹುದು.

ಕರಾವಳಿ ಭಾಗದ ಭೂತಾರಾಧನೆಗೆ ಸಂಬಂಧಿಸಿದ ಗಗ್ಗರ, ಮುಖವಾಡಗಳು, ಆಭರಣಗಳೂ, ಖಡ್ಗ, ಗುರಾಣಿ ಮುಂತಾದ ಆಯುಧಗಳೂ ಇಲ್ಲಿವೆ. ಜೊತೆಗೆ ಕೇರಳದ ತೆಯ್ಯಂ ಗೆ ಸಂಬಂಧಿಸಿದ ಅನೇಕ ವಸ್ತುಗಳಿವೆ, ಮುಖ್ಯವಾಗಿ ಮುಖವಾಡಗಳನ್ನು ಅಭ್ಯಾಸ ಮಾಡುವವರಿಗೆ ಇಲ್ಲಿ ಅಮೂಲ್ಯ ಮಾಹಿತಿಗಳಿವ.

ಕಮಲಾದೇವಿಯರು ಆರಂಭಿಸಿದ ಈ ಮ್ಯೂಸಿಯಂನ್ನು ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಕಾರ್ಯದರ್ಶಿಯಾಗಿದ್ದ ಶ್ರೀಮತಿ ಉಷಾ ಮಲಿಕ್ ಅವರು ಈಗ ನೋಡಿಕೊಳ್ಳುತ್ತಿದ್ದಾರೆ. ಶಿವರಾಮ ಕಾರಂತರ ಯಕ್ಷರಂಗವನ್ನು ವಿದೇಶಗಳಿಗೆ ಕೊಂಡೊಯ್ಯಲು ಸಹಾಯ ಮಾಡಿದ ಉಷಾ ಅವರನ್ನು ಕಾರಂತರು ಮುಕ್ತ ಕಂಠದಿಂದ ಹೊಗಳಿದ್ದನ್ನು ನಾವು ನೆನೆಸಿಕೊಳ್ಳಬಹುದು. ಉಷಾ ಅವರೂ ಕಾರಂತರನ್ನು ಅತ್ಯಂತ ಗೌರವದಿಂದ ಸ್ಮರಿಸಿಕೊಳ್ಳುತ್ತಿದ್ದಾರೆ. ' ಪುರುಷೋತ್ತಮ ಬಿಳಿಮಲೆಯವರು ಇಲ್ಲಿಗೆ ಬಂದು ಇಲ್ಲಿನ ವಸ್ತುಗಳನ್ನು ಜೋಡಿಸಲು ನೆರವಾದರು, ಹಾಗೇ ಎಲ್ಲ ಕನ್ನಡಿಗರೂ ಇಲ್ಲಿಗೆ ಬರಬೇಕೆಂದು ನಾನು ಬಯಸುವೆ' ಎನ್ನುತ್ತಾರೆ ಉಷಾ ಮಲ್ಲಿಕ್.

ಕನ್ನಡಿಗರ ಹೆಮ್ಮೆಗೆ ಕಾರಣವಾಗಿರುವ ಈ ಸ್ಮಾರಕವು ಭಾರತದ ಸಂಸ್ಕೃತಿ ಮತ್ತು ಕಲೆಗಳಿಗೆ ಸಂಬಂದಿಸಿದ ಹಾಗೇ ದೇಶ ವಿದೇಶಗಳಿಗೆ ಮಾದರಿಯಾಗಿದೆ. ಈ ವಸ್ತು ಸಂಗ್ರಹಾಲಯವು ಇನ್ನಷ್ಟು ಮೇಲಕ್ಕೇರಲು ಈಗ ಹಣದ ಅವಶ್ಯಕತೆ ಇದೆ. ಕರ್ನಾಟಕ ಸರಕಾರಇತ್ತ ಗಮನ ಹರಿಸುವುದೇ?

■ ಸರೋಜ ವಿಜಯಾಕುಮಾರ್



ಕೊಂಡಮಂತಾಯ ಭೂತ

# ಡಾ.ಜಿ.ಎ.ಬಿರಾದಾರ ಅವರ ಕೃತಿ ಬಿಡುಗಡೆ

ಕೇಂದ್ರ ಸಂಸ್ಕೃತಿ ಮಂತ್ರಾಲಯದ ಭಾರತ ರಾಷ್ಟ್ರೀಯ ಪತ್ರಾಗಾರ, ನವದೆಹಲಿಯಲ್ಲಿ ಪತ್ರಾಗಾರ ಅಧಿಕಾರಿಗಳಾಗಿರುವ ಹಾಗೂ ದೆಹಲಿ ಕರ್ನಾಟಕ ಸಂಘದ ಸದಸ್ಯರೂ, ಸಕ್ರಿಯರೂ ಆಗಿರುವ ಡಾ. ಜಿ.ಎ. ಬಿರಾದಾರ ಅವರು ಬರೆದ "ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನುಭಂಗ ಚಳವಳಿ" ಎನ್ನುವ ಕನ್ನಡದ ಅಪೂರ್ವ ಕೃತಿಯನ್ನು ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿಗಳಾದ ಶ್ರೀ ಅಗ್ರಹಾರ ಕೃಷ್ಣಮೂರ್ತಿ ಅವರು ಸಂಘದ ಸಭಾಂಗಣದಲ್ಲಿ ಜುಲೈ 18ರ ಸಂಜೆ ಲೋಕಾರ್ಪಣೆ ಮಾಡಿದರು.

ಭಾರತೀಯ ಅಧ್ಯಯನಗಳ ಅಮೆರಿಕ ಸಂಸ್ಥೆಯ ನಿರ್ದೇಶಕರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಪುಸ್ತಕದ ಬಗ್ಗೆ ಮಾತನಾಡುತ್ತ ನಾವು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಬಗೆಗೆ ತಿಳಿದಿರುವುದು ಪ್ರಮುಖ ನಾಯಕರುಗಳಾದ ಮಹಾತ್ಮ ಗಾಂಧಿ, ಜವಾಹರಲಾಲ ನೆಹರು, ವಲ್ಲಭಬಾಯಿ ಪಟೇಲ್, ಸುಭಾಷ್‌ಚಂದ್ರ ಬೋಸ್ ಅವರು ಮಾಡಿದ ಚಳವಳಿಯ ವಿಷಯಗಳು ಮಾತ್ರ. ಆದರೆ ಲೇಖಕರಾದ ಡಾ. ಬಿರಾದಾರ ಅವರು ರಾಷ್ಟ್ರೀಯ ಸಂಗ್ರಾಮದಲ್ಲಿ ಮುಂಬಯಿ ಕರ್ನಾಟಕದ ಜನಸಾಮಾನ್ಯರು ಕರ್ನಾಟಕದ ಪ್ರಮುಖ ನಾಯಕರಾದ ಗಂಗಾಧರ ರಾವ್ ದೇಶಪಾಂಡೆ, ಡಾ. ಎನ್.ಎಸ್. ಹರ್ಡೀಕರ್, ಶ್ರೀನಿವಾಸ ರಾವ್ ಕೌಜಲಗಿ, ಕಾರ್ನಾಡ್ ಸದಾಶಿವ ರಾವ್, ಸಿದ್ದಪ್ಪ ಹೊಸಮನಿ, ವೀರಣ್ಣ ಗೌಡ ಪಾಟೀಲ್, ಚೆನ್ನಬಸಪ್ಪ ಅಂಬಲಿ, ಶಂಖರಗೌಡ ಪಾಟೀಲ್, ಮಂಜಪ್ಪ ಹರ್ಡೇಕರ್, ಅವರುಗಳ ನಾಯಕತ್ವದಲ್ಲಿ ಯಾವ ರೀತಿಯಿಂದ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು ಎಂಬುವ ಕುರಿತು ಆಳವಾಗಿ ಅಧ್ಯಯಿನಿಸಿ ಇಲ್ಲಿಯವರೆಗೆ ಯಾರಿಗೂ ತಿಳಿಯದೇ ಇರುವ ಮಹತ್ವದ ವಿವರಗಳನ್ನು ಕನ್ನಡಿಗರಿಗೆ ಒದಗಿಸಿರುವರು. ಡಾ. ಬಿರಾದಾರ ಕೃತಿಯು ಸವಿನಯ ಕಾನೂನು ಭಂಗ ಚಳವಳಿಯ ಚಾರಿತ್ರಿಕ ವಿವರಗಳನ್ನು ನೀಡುವುದರ ಜೊತೆಗೆ ಚಳವಳಿಯು ಇದಿರುಸುತ್ತಿದ್ದ ಆಂತರಿಕ ಸಮಸ್ಯೆಗಳನ್ನು ಹಾಗೂ ನಮ್ಮ ಚಳವಳಗಾರರು ಅಂತಹ ಸಮಸ್ಯೆಗಳನ್ನು ಬಗೆಹರಿಸಿಕೊಂಡ ಬಗೆಯನ್ನು ಸೂಕ್ಷ್ಮವಾಗಿ ದಾಖಲಿಸುತ್ತದೆ ಎಂಬುದು ನಮಗಿಂದು ಮುಖ್ಯವಾದ ವಿಚಾರವಾಗಿದೆ. ಇಂತಹ ಕ್ಲಿಷ್ಟಕರವಾದ ವಿಷಯದ ಬಗ್ಗೆ ಬರೆಯುವಾಗ ಪ್ರತಿಭಾವಂತ ಸಂಶೋಧಕರಾದ ಡಾ. ಬಿರಾದಾರ ಅವರು ತುಂಬಾ ನಿಸ್ಸಂಕೋಚವಾದ ಹಾದಿಯನ್ನು ಅನುಸರಿಸಿರುವುದೂ ಮೆಚ್ಚತಕ್ಕ ವಿಚಾರವಾಗಿದೆ.

ಕೃತಿಯುದ್ದಕ್ಕೂ ಡಾ. ಬಿರಾದಾರ ಅವರು ನೀಡಿರುವ ವಿವರಗಳನ್ನು ಅವಲೋಕಿಸಿದಾಗ ಚಳವಳಿಯ ಸಂದರ್ಭದಲ್ಲಿ ಆಗಾಗ ತಲೆ ಎತ್ತುತ್ತಿರುವ 5 ಪ್ರಮುಖ ಅಂಶಗಳು ನಮ್ಮ ಗಮನಕ್ಕೆ ಬರುವವು. ಅವು ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ನಡುವಿನ ಸಂಘರ್ಷ, ಹಿಂದು ಮತ್ತು ಮುಸ್ಲಿಂರ ನಡುವಿನ ಮತಭೇದ, ಜಾತಿ ಜಾತಿಗಳ ನಡುವಿನ ಬಿಕ್ಕಟ್ಟುಗಳು, ಅಸ್ಪೃಶ್ಯತೆಯ ಸಮಸ್ಯೆ ಮತ್ತು ಕರ್ನಾಟಕ ಏಕೀಕರಣ. ಈ ಎಲ್ಲಾ ಸಮಸ್ಯೆಗಳ ಉದ್ಭವಿಕೆ, ಅವುಗಳ ನಿವಾರಣೆಗಾಗಿ 1920-30ರ ದಶಕದಲ್ಲಿ ನಮ್ಮ ರಾಷ್ಟ್ರೀಯ ಹಾಗೂ ಪ್ರಾಂತೀಯ ನಾಯಕರುಗಳು ಹೇಗೆ ಬಗೆಹರಿಸಿಕೊಂಡರು ಎಂಬುದರ ಸಮಗ್ರ ವಿವರ ಲೇಖಕರು ಕೃತಿಯಲ್ಲಿ ನೀಡಿರುವರು. ಜೊತೆಗೆ ಕರ್ನಾಟಕದಲ್ಲಿ ಬಹುದೊಡ್ಡ ಸಮಾಜವಾದ ವೀರಶೈವ ನಾಯಕರುಗಳು ಹಾಗೂ ಮಠಾಧೀಶರು ಆರಂಭದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ವೀರಶೈವರ ಶೈಕ್ಷಣಿಕ ಸುಧಾರಣೆಯಲ್ಲಿ ತೊಡಗಿದ್ದರು ಎಂಬುದರ ವಿವರಗಳನ್ನು ಬಹು ಪ್ರಯಾಸದಿಂದ ಲೇಖಕರು ನೀಡಿರುವರು. ಇದರಿಂದ ಸಮಾಜದ ಹಾಗೂ ದೇಶದ ಅಭಿವೃದ್ಧಿಗೆ ಶೈಕ್ಷಣಿಕವಾಗಿ ಮುಂದುವರಿಯುವುದು ಎಷ್ಟು ಅವಶ್ಯಕ ಎಂಬುದರ ಮೂಲವನ್ನು ಸಾಬೀತುಪಡಿಸಿರುವರು ಎಂದು ನುಡಿದರು.

ಹಾಗೆಯೇ ಕೃತಿಯ ಸುದೀರ್ಘ ವಿವರ ನೀಡುತ್ತಾ ಡಾ. ಬಿಳಿಮಲೆ ಅವರು ಸಾಮಾನ್ಯವಾಗಿ ಭಾರತ ಪುರುಷ ಪ್ರಧಾನ ಸಮಾಜ ಎಂದು ತಿಳಿಯಲಾಗಿದೆ. ಆದರೆ ದೇಶದ ಸ್ವಾತಂತ್ರ್ಯ ಸಂಗ್ರಾಮ ಸಂದರ್ಭದಲ್ಲಿ ಕನ್ನಡದ ವೀರ ಮಹಿಳೆಯರ ಬಗೆಗೆ ವಿಶೇಷವಾಗಿ ನಾಗವ್ವ ಪಾಟೀಲ, ಫಕೀರವ್ವ ಹಂಪಿಹೊಳಿ, ಕೃಷ್ಣಾಬಾಯಿ ಪಂಜೀಕರ, ಉಮಾಬಾಯಿ ಕುಂದಾಪುರ, ಕಾಶೀಬಾಯಿ ಗದ್ರೆ ಅವರಂತಹ ಮಹಿಳೆಯರ ಸಾಹಸ ಕುರಿತಂತೆ ಲೇಖಕರು ವಿಶೇಷ ಅಧ್ಯಯನ ಮಾಡಿ, ಕರ್ನಾಟಕದ ಮಹಿಳೆಯರ ವೀರ ಹೋರಾಟದ ಬಗೆಯನ್ನು ಸಮಗ್ರವಾಗಿ ಬಹುಪ್ರಯಾಸಪಟ್ಟು ದಾಖಲಿಸಿರುವರು.

ಅಲ್ಲದೆ 1934ರಲ್ಲಿ ಅಸ್ಪೃಶ್ಯತೆ ವಿರುದ್ಧ ಮಹಾತ್ಮ ಗಾಂಧೀಜಿಯವರು ಕರ್ನಾಟಕ ಪ್ರಾಂತ್ಯದಲ್ಲಿ ಪ್ರವಾಸ ಮಾಡಿರುವ ಸಮಗ್ರ ವಿವರವನ್ನು ಲೇಖಕರು ಪ್ರತ್ಯೇಕ ಅಧ್ಯಾಯದಲ್ಲಿ ನೀಡಿರುವರು. ಗಾಂಧೀಜಿಯವರಂತೂ ಅಸ್ಪೃಶ್ಯತೆಗೆ ಬದ್ಧ ವಿರೋಧಿಯಾಗಿದ್ದರು. ಆದರೆ ಅವರ ಅನುಯಾಯಿಗಳಲ್ಲಿ ಕೆಲವರಿಗಾದರೂ ಈ ವಿಷಯದಲ್ಲಿ ಗೊಂದಲವಿದ್ದಿತು. ಗಾಂಧೀಜಿ ಶಿರಸಿಗೆ ಭೇಟಿ ನೀಡಿದಾಗ, ಶಿರಸಿಯ ಜನತೆ ಮಾರಿಕಾಂಬ ದೇವಿ ದೇವಾಲಯಕ್ಕೆ ಹರಿಜನರ ಪ್ರವೇಶಕ್ಕೆ ಒಪ್ಪಿದ್ದರು. ಆದರೆ ಅಲ್ಲಿನ ಪ್ರಾಣಿಬಲಿ ನಿಂತಿರಲಿಲ್ಲ. ಹೀಗಾಗಿ ಗಾಂಧೀಜಿ ಆ ದೇವಾಲಯಕ್ಕೆ ಹೋಗಲು ಒಪ್ಪಲಿಲ್ಲ. ಅಲ್ಲದೆ ಪ್ರಾಣಿಬಲಿ ಕೊಡುವ ಯಾವ ದೇವಾಲಯಕ್ಕೂ ಹರಿಜನರು ಹೋಗಬಾರದು ಎಂದು ಹೇಳಿದರು. ಇದರ ನೇರ ಪರಿಣಾಮವೆಂದರೆ ಅಲ್ಲಿ ಪ್ರಾಣಿಬಲಿ ನಿಂತಿತು.

ಮಾತು ಮುಂದುವರಿಸಿದ ಡಾ. ಬಿಳಿಮಲೆ ಅವರು 1930ರ ದಶಕದಲ್ಲಿ ಕರ್ನಾಟಕದಲ್ಲಿ ಏಕೀಕರಣ ಚಳವಳಿಯೂ ನಡೆದಿತ್ತು. ಪ್ರಾದೇಶಿಕ ಭಾವದಿಂದ ಕೂಡಿದ ಏಕೀಕರಣ ಚಳವಳಿ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪೂರಕವಾಗಿಯೇ ನಡೆದಿದ್ದಿತು. ಮುಂಬಯಿ ಕರ್ನಾಟಕ, ಮದ್ರಾಸ್ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ ಮತ್ತು ಮೈಸೂರು ಪ್ರಾಂತಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡಿಗರು ದೇಶದ ಬಿಡುಗಡೆಗಾಗಿ ಹೋರಾಡುತ್ತಲೇ ತಾವುಗಳು ಒಂದಾಗುವ ಕನಸೂ ಕಾಣುತ್ತಿದ್ದರು. ಡಾ. ಬಿರಾದಾರ ಅವರು ನೀಡಿರುವ ಕರ್ನಾಟಕ ಸರ್ವಪಕ್ಷೀಯ ಪರಿಷತ್ತಿನ 11 ನಿರ್ಣಯಗಳನ್ನು ಗಮನಿಸಿದರೆ, ನಮ್ಮ ಹಿರಿಯರು ತಮ್ಮ ಮುಂದಿರುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಿದ್ದರು ಎಂಬ ವಿಷಯ ಸ್ಪಷ್ಟವಾಗಿ ದೊರೆಯುವುದು.

ಒಟ್ಟಾರೆ ಡಾ. ಬಿರಾದಾರರ ಈ ಕೃತಿ ನಮಗೆ ಅಪರಿಚಿತವಾದ ಚರಿತ್ರೆಯ ಸೂಕ್ಷ್ಮ ವಿವರಗಳನ್ನು ಒಳಗೊಂಡ ಚಾರಿತ್ರಿಕ ಗ್ರಂಥವಾದರೂ ಅದೊಂದು ಉತ್ತಮ ಕಾದಂಬರಿಯಂತೆ ಓದುಗರನ್ನು ಹಾಗೆಯೇ ಓದಿಸಿಕೊಂಡು



ಕೃತಿ ಬಿಡುಗಡೆ



ಕೃತಿಯ ಬಗ್ಗೆ ಅಗ್ರಹಾರ ಕೃಷ್ಣಮೂರ್ತಿಯವರು ಮಾತನಾಡುತ್ತಿರುವುದು

ಹೋಗುತ್ತದೆ ಎಂದರು. ಇಂತಹ ಮಹಾನ್ ಕಾರ್ಯ ಮಾಡಿದ ಮಿತ್ರ ಹಾಗೂ ಸಂಶೋಧಕ ಡಾ. ಬಿರಾದಾರ ಅವರು ಅಭಿನಾಂದನಾರ್ಹರು.
ಸಮಾರಂಭದ ಮುಖ್ಯ ಅತಿಥಿಗಳಾದ ಶ್ರೀ ಅಗ್ರಹಾರ ಕೃಷ್ಣಮೂರ್ತಿಯವರು ಮಾತನಾಡುತ್ತ ಡಾ. ಜಿ.ಎ. ಬಿರಾದಾರ ಅವರ ಈ ಕೃತಿ ಅದ್ಭುತವಾದುದು. ಒಬ್ಬ ಪ್ರತಿಭಾವಂತ ಇತಿಹಾಸಕಾರ ಎಲ್ಲಾ ಘಟನೆಗಳ ಬಗ್ಗೆ ಎಷ್ಟೊಂದು ಎಚ್ಚರವಹಿಸುವನು ಎಂಬುದಕ್ಕೆ ಕೃತಿಯಲ್ಲಿರುವ ಲೇಖಕನ ನುಡಿಯ ಒಂದು ಪ್ಯಾರವನ್ನು ಓದಿ ಹೇಳಿದರು. ಇದರಿಂದ ನಮಗೆ ತಿಳಿಯುವುದೇನೆಂದರೆ ದೆಹಲಿಯಲ್ಲಿ ಕುಳಿತು ಕನ್ನಡದಲ್ಲಿ ಗ್ರಂಥ ಬರೆಯುವುದು ಎಷ್ಟು ಕಷ್ಟಕರವಾದುದು ಎಂಬುದನ್ನು ಲೇಖಕರು ಕನ್ನಡಿಗರ ಮುಂದೆ ಇಟ್ಟಿರುವರು. ಸಮಸ್ಯೆ ಇರುವುದು ಎಂದು ಕನ್ನಡ ಹಾಗೂ ಕರ್ನಾಟಕದ ಬಗ್ಗೆ ಬರೆಯುವುದನ್ನು ಲೇಖಕರು ಬಿಟ್ಟರೆ ಅವರಿಗೆ ನಾನು ಕ್ಷಮಿಸುವುದಿಲ್ಲ ಎಂದು ಹೇಳಿದರು. ಕೃತಿಯುದ್ದಕ್ಕೂ ಲೇಖಕರು ನೀಡಿರುವ ವಿವರದಿಂದ ಅವರ ಪಾರದರ್ಶಕತೆ ಎದ್ದು ಕಾಣುತ್ತದೆ. ಪ್ರತಿಯೊಬ್ಬರು ಓದಬೇಕಾಗಿರುವ ಒಂದು ಮಹತ್ವದ ಗ್ರಂಥ ಇದಾಗಿರುವುದು ಎಂದು ಹೇಳಿದರು.
ಕೃತಿಯ ಲೇಖಕರಾದ ಡಾ. ಬಿರಾದಾರ ಅವರು ಮಾತನಾಡುತ್ತ ದೆಹಲಿಯಲ್ಲಿ ಕುಳಿತು ಗ್ರಂಥ ಬರೆದು ಪ್ರಕಟಿಸುವುದೇ ಲೇಖಕರಿಗಿರುವ ಈಗಿನ ಬಹುದೊಡ್ಡ ಸಮಸ್ಯೆ ಎಂದರು. ಗ್ರಂಥದ ಬಿಡುಗಡೆಗಾಗಿ ದೆಹಲಿ ಕರ್ನಾಟಕ ಸಂಘ ದೊರಕಿಸಿದ ಈ ಸುಸಂಧಿಗಾಗಿ ಸಂಘದ ಕಾರ್ಯಕಾರಿ ಮಂಡಳಿಗೆ ವಿಶೇಷವಾಗಿ ಕಾರ್ಯಕಾರಿ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಗ್ರಂಥವನ್ನು ಕರ್ನಾಟಕ ಸಂಘದಲ್ಲಿ ಬಿಡುಗಡೆಗಾಗಿ ಪ್ರೇರಣೆ ನೀಡಿದ ಹಾಗೂ ಗ್ರಂಥ ಕುರಿತಂತೆ ಸುದೀರ್ಘವಾಗಿ ಮಾತನಾಡಿದ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ಧನ್ಯವಾದವನ್ನು ಅರ್ಪಿಸಿದರು. ಬಿಡುವಿಲ್ಲದ ಕಾರ್ಯದಲ್ಲಿ ನಮಗಾಗಿ ಬಿಡುವು ಮಾಡಿಕೊಂಡು ನಮ್ಮೊಂದಿಗೆ ಬೆರೆತು ಗ್ರಂಥವನ್ನು ಬಿಡುಗಡೆ ಮಾಡಿರುವ ಶ್ರೀ ಅಗ್ರಹಾರ ಕೃಷ್ಣಮೂರ್ತಿ ಅವರಿಗೆ ಹೃದಯಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸಿದರು. ಈ ಸಮಾರಂಭಕ್ಕೆ ಬಹುಸಂಖ್ಯೆಯಲ್ಲಿ ಬಂದಿರುವ ಎಲ್ಲ ಕನ್ನಡಿಗರಿಗೆ ನಮಸ್ಕಾರ ಹಾಗೂ ಕೃತಜ್ಞತೆಗಳನ್ನು ಸಲ್ಲಿಸಿದರು.
ಸಂಘದ ಕಾರ್ಯಕಾರಿ ಅಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ ಅವರು ಇಂತಹ ಮಹತ್ವದ ಗ್ರಂಥಗಳನ್ನು ಕನ್ನಡಿಗರು ಮಾಡಬೇಕು ಎಂದು ಹೇಳಿ, ಯಾವ ರೀತಿಯಾಗಿ ಈ ಕಾರ್ಯಕ್ರಮವನ್ನು ಆಯೋಜಿಸಲಾಯಿತು ಎಂಬುದನ್ನು ತಿಳಿಸಿದರು. ಸಂಘದ ಕನ್ನಡಪರ ಕಾರ್ಯಕ್ರಮಗಳಿಗೆ ಎಲ್ಲರ ಸಹಕಾರದ ಅವಶ್ಯಕತೆ ಇರುವುದು ಎಂದು ಹೇಳಿ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.
ವೇದಿಕೆಯಲ್ಲಿ ಪುಸ್ತಕದ ಪ್ರಕಾಶಕರಾದ ಮೈಸೂರಿನ ಅಭಿರುಚಿ ಪ್ರಕಾಶನದ ಎ. ಗಣೇಶ್ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸಂಘದ ಜಂಟೀ ಕಾರ್ಯದರ್ಶಿ ಎನ್.ಆರ್. ಶ್ರೀನಾಥ್ ನಿರೂಪಿಸಿದರು.
ಇದೇ ಸಂದರ್ಭದಲ್ಲಿ ಅಭಿರುಚಿ ಪ್ರಕಾಶನದ ಹೊಸ ವಿನ್ಯಾಸದಲ್ಲಿ ಪ್ರಕಟವಾದ 'ತಿಂಗಳು' ಎಂಬ ಸುಂದರ ಮಾಸ ಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು.

■ **ನಂದಿನಿ ಮಲ್ಯ**

# ಶ್ರೀ ವೀರಣ್ಣ ಕಮ್ಮಾರ ಅವರಿಗೆ ಆತ್ಮೀಯ ಬೀಳ್ಕೊಡುಗೆ



ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ದೆಹಲಿ ವಲಯದ ಪ್ರಭಾರ ಸಹನಿರ್ದೇಶಕರಾಗಿ ಕಳೆದ ಕೆಲವೊಂದು ವರ್ಷಗಳಲ್ಲಿ ದೆಹಲಿ ಕನ್ನಡಿಗರಿಗೆ ಆತ್ಮೀಯ ಹಾಗೂ ಚಿರಪರಿಚಿತರಾಗಿದ್ದ ಶ್ರೀ ವೀರಣ್ಣ ಕಮ್ಮಾರ ಅವರು ಬೆಂಗಳೂರಿಗೆ ವರ್ಗಾವಣೆಗೊಂಡ ಸಂದರ್ಭದಲ್ಲಿ ಅವರನ್ನು ದೆಹಲಿ ಕರ್ನಾಟಕ ಸಂಘವು ಜುಲೈ 18ರ ಸಂಜೆ ಆತ್ಮೀಯ ವಾತಾವರಣದಲ್ಲಿ ಅಭಿನಂದಿಸಿ ಬೀಳ್ಕೊಟ್ಟಿತು. ಸಂಘದ ಕಾರ್ಯಾಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡಿ ಶ್ರೀ ವೀರಣ್ಣ ಕಮ್ಮಾರ ಅವರು ದೆಹಲಿಗೆ ಬಂದು ಕನ್ನಡದ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಸಕ್ರಿಯರಾಗಿದ್ದರು. ಕೇವಲ ದೆಹಲಿಗೆ ಸೀಮಿತಗೊಳಿಸದೆ ದೆಹಲಿ ಪರಿಸರದ ಫರೀದಾಬಾದ್, ಗುರುಗಾಂ, ನೋಯ್ಡಾ ಹಾಗೂ ಚಂಡೀಗಢಗಳಲ್ಲಿ ಕನ್ನಡ ಕಾರ್ಯಕ್ರಮಗಳನ್ನು ಸುಸೂತ್ರವಾಗಿ ಆಯೋಜಿಸಿದ್ದಾರೆ. ವೀರಣ್ಣ ಕಮ್ಮಾರ ಅವರು ಬೆಂಗಳೂರಿಂದ ನಿರ್ದೇಶಕರನ್ನು ತರಿಸಿ ಮಕ್ಕಳಿಗಾಗಿ ತಯಾರಿಸಿದ 'ಗೋಡೆ' ನಾಟಕ ಹಲವು ಪ್ರದರ್ಶನಗಳನ್ನು ಕಂಡಿದ್ದು, ಸ್ವತಃ ರಂಗಕರ್ಮಿಯಾದ ಅವರು ನಾಟಕಗಳನ್ನು ನಿರ್ದೇಶಿಸಿ, ಸಂಘದಲ್ಲಿ ಪ್ರದರ್ಶಿಸಿದ್ದಾರೆ.
ಸಂಘದ 'ಅಭಿಮತ' ಪತ್ರಿಕೆಗೂ ಕತೆ, ಲೇಖನಗಳನ್ನು ನೀಡಿರುವ ಜೊತೆಗೆ ಅಭಿಮತ ಹೇಗೆ ಬರಬೇಕೆಂಬುದರ ಬಗ್ಗೆ ಮಾರ್ಗದರ್ಶನ ನೀಡಿ ನಮಗೆ ಹುರಿದುಂಬಿಸುತ್ತಿದ್ದರು. ಚಟುವಟಿಕೆಯ ಕೇಂದ್ರ ಬಿಂದುವಾಗಿದ್ದ ಕಮ್ಮಾರ ಅವರು ಬೆಂಗಳೂರಿಗೆ ಹೋಗುತ್ತಿರುವುದು ನಮಗೆ ದೊಡ್ಡ ನಷ್ಟವಾದರೂ ಬೆಂಗಳೂರಿನಲ್ಲಿ ಸಂಘದ ರಾಯಭಾರಿಯಾಗಿ ಕೆಲಸ ಮಾಡಿ ಸಂಘದ ಸಾಂಸ್ಕೃತಿಕ ಬೇಕುಗಳಿಗೆ ಸ್ಪಂದಿಸಬೇಕೆಂದು ಬೆಳ್ಳಾರೆ ವಿನಂತಿಸಿಕೊಂಡರು.
ಸಂಘದ ಮಾಜಿ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡಿ ವೀರಣ್ಣ ಕಮ್ಮಾರ ಅವರು ಸಂಘದ ಜೊತೆಗೆ ಸಂಘದೊಂದಿಗೆ ಸದಾ ಸ್ಪಂದಿಸುತ್ತಿದ್ದು ರಾಜಧಾನಿಯಲ್ಲಿ ಅವರ ಕನ್ನಡ ಸೇವೆ ನಿಜಕ್ಕೂ ಪ್ರಶಂಸನೀಯವೆಂದು ಶುಭ ಹಾರೈಸಿದರು.
ಸಮಾರಂಭದ ಅಧ್ಯಕ್ಷತೆಯನ್ನು ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿ ಶ್ರೀ ಅಗ್ರಹಾರ ಕೃಷ್ಣಮೂರ್ತಿಯವರು ವಹಿಸಿ ಮಾತನಾಡಿ ಕಮ್ಮಾರ ಅವರಂತ ಸಕ್ರಿಯ ಕನ್ನಡಿಗರಿಂದಲೇ ಸಂಘ ಸಂಸ್ಥೆಗಳು ಬೆಳೆಯುವುದೆಂದರು.
ದೆಹಲಿ ಕರ್ನಾಟಕ ಸಂಘದ ವತಿಯಿಂದ ವೀರಣ್ಣ ಅವರಿಗೆ ಶಾಲು ಹೊದೆಸಿ, ಸ್ಮರಣಿಕೆಯನ್ನಿತ್ತು ಸನ್ಮಾನಿಸಲಾಯಿತು. ಜೊತೆಗೆ ದೆಹಲಿಯ ಇತರ ಸಂಘ ಸಂಸ್ಥೆಗಳ ವತಿಯಿಂದಲೂ ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮವನ್ನು ಸಂಘದ ಜಂಟೀ ಕಾರ್ಯದರ್ಶಿ ಎನ್.ಆರ್. ಶ್ರೀನಾಥ್ ನಿರ್ವಹಿಸಿದರು.

■ **ಡಾ. ಸುಮಂಗಲಾದೇವಿ**

# ಜಗಜ್ಯೋತಿ ಬಸವೇಶ್ವರ ಚರಿತ್ರೆ ಯಕ್ಷಗಾನದ 75ನೇ ಪ್ರದರ್ಶನ ನಾಟ್ಯಶ್ರೀ ಕಲಾ ತಂಡ ಶಿವಮೊಗ್ಗ ಇವರಿಂದ

ದಿನಾಂಕ 18.7.2010ರ ಸಂಜೆ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಾಟ್ಯಶ್ರೀ ಕಲಾತಂಡ, ಶಿವಮೊಗ್ಗ ಇವರಿಂದ ಜಗಜ್ಯೋತಿ ಬಸವೇಶ್ವರ ಚರಿತ್ರೆ ಎಂಬ ಯಕ್ಷಗಾನದ 75ನೇ ಪ್ರದರ್ಶನ ತುಂಬಾ ಅದ್ಭುತವಾಗಿ ಮೂಡಿಬಂತು. ಹೊಸ್ತೋಟ ಮಂಜುನಾಥ ಭಾಗವತರು ಬಸವಣ್ಣನವರ ಜೀವನ ಚರಿತ್ರೆ ಹಾಗೂ ಅವರ ವಚನಗಳ ಸಾರವನ್ನು ಯಕ್ಷಗಾನಕ್ಕೆ ಅಳವಡಿಸಿ. ರಚಿಸಿದ ಈ ಯಕ್ಷಗಾನವನ್ನು ನಾಟ್ಯಶ್ರೀ ಕಲಾ ತಂಡ ಕಲಾವಿದರು ತುಂಬಾ ಸಮರ್ಥವಾಗಿ ಅಭಿನಯಿಸಿ ತಮ್ಮ ಜಾಣ್ಮೆಯನ್ನು ಮೆರೆದಿದ್ದರು.
ಯಕ್ಷಗಾನ ನಿರ್ದೇಶನ ಹಾಗೂ ಭಾಗವತಿಕೆ : ಶ್ರೀ ಕೇಶವ ಹೆಗಡೆ, ಕೊಳಗಿ, ಮೃದಂಗ : ವೆಂಕಟರಮಣ, ಚಂಡೆ : ನಾಗರಾಜ ಹೆಗ್ಗೋಡು





ಬಸವೇಶ್ವರ ಯಕ್ಷಗಾನದ ದೃಶ್ಯ





ಹನುಮಾರ್ಜುನ ಯಕ್ಷಗಾನದ ದೃಶ್ಯ

ಕಲಾವಿದರು: ವಿದ್ವಾನ್ ದತ್ತಮೂರ್ತಿ ಭಟ್ಟ–ಬಸವೇಶ್ವರ (ಭಾಗ–ಎರಡು), ಅಶೋಕ ಭಟ್ಟ, ಸಿದ್ದಾಪುರ–ಗಂಗಾಂಬಿಕೆ, ಅಕ್ಕಮಹಾದೇವಿ, ಪ್ರಭಾಕರ ಹೆಗಡೆ ಹಣಜಿಬೈಲು–ಬಿಜ್ಜಳ, ಸಂಜಯ ಬೆಳೆಯೂರು–ಮಂಚಣ್ಣ, ಅವಿನಾಶ ಸಿದ್ದಾಪುರ–ಬಲದೇವ, ಜಗದೇವ, ಶಂಕರ ನಾರಾಯಣ, ಹೊಸಕೊಪ್ಪ, ಅಲ್ಲಮಪ್ರಭು, ಮಂಜುಗೌಡ–ಹರಳಯ್ಯ, ನವ್ಯಾ ದತ್ತಮೂರ್ತಿ–ಬಸವ (ಭಾಗ–ಒಂದು)
ಈ ಎಲ್ಲಾ ಕಲಾವಿದರು ದೆಹಲಿ ಕನ್ನಡಿಗರಿಗೆ ಅತ್ಯಂತ ಉತ್ತಮ ಅಭಿನಯದ ಮೂಲಕ ಮನ ಮುಟ್ಟುವ ಯಕ್ಷಗಾನವೊಂದನ್ನು ನೀಡಿದರು. ದಿನಾಂಕ 19.07.2010ರಂದು ಇದೇ ಕಲಾವಿದರು 'ಹನುಮಾರ್ಜುನ' ಎಂಬ ಯಕ್ಷಗಾನ ಪ್ರದರ್ಶನವನ್ನಿತ್ತರು. ಕಲಾವಿದರಿಗೆ ಸಂಘದ ಉಪಾಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ ಹಾಗೂ ಜಾನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಹೂಗುಚ್ಛ ನೀಡಿ ಗೌರವಿಸಿದರು.

■ **ಸಾಮ್ರಾಟ್ ಗೌಡ**

# ಆನಂದ

ಎಲೆ, ಮಾಮರವೇ ಕೋಗಿಲೆಯ ಕಂಡೆಯಾ ?
ನೀ ಕೇಳಕ್ಕ ಕೋಗಿಲೆಯ ಕಂಠಸಿರಿಯನ್ನ
ಮನಕೆ ನೀಡಿತಕ್ಕ ಸುಮಧುರ ಸವಿಗಾನ

ಎಲೆ ಬನವೇ ಸಂಪಿಗೆಯ ಕಂಡೆಯಾ ?
ಸಂಪಿಗೆ ಹೂವಿನ ಕಂಪು ಸೂಸಿದಾಗ
ಗರಿಗೆದರಿ ಮನ ಅರಳಿತು
ನೀ ಸವಿಯಕ್ಕ ಅದರ ಕಂಪ

ಎಲೆ ಬಿಸಿಲೆ ತಂಗಾಳಿಯ ಕಂಡೆಯಾ ?
ಬಿಸಿಲ ಬೇಗೆಯಳ ಬೆಂದು
ಮರದ ನೆಳ್ಳಲ್ಲಿ ತಂಗಿದಾಗ
ತನುಮನಕೆ ನೀಡಿತಕ್ಕ ಆನಂದದ ತೋರಣ.

ಎಲೆ ಸಾಗರವೇ ರವಿಯ ಕಂಡೆಯಾ ?
ಕಣ್ ಮನ ಸೆಳೆಯುವ
ತಂಪಾದ, ಸೊಂಪಾದ, ಸೊಗಸಾದ
ಮನಕೆ ರಂಗೇರಿಸುವ ಹೂ ಬಾಣ
ನೀ ಸವಿಯಕ್ಕ ಆ ಮುಸ್ಸಂಜೆ ನೋಟ

ಸವಿನೆನಪುಳವುದು ಸತ್ಸಂಗದಿಂದ
ಕಡಿನೆನಪುಳವುದು ದುಸ್ಸಂಗದಿಂದ
ಜೀವನ ಚಕ್ರದ ಹಾದಿಯನ್ನ
ನೀ ತುಳಯಕ್ಕ ಜಾಗರೂಕತೆಯಿಂದ.



**ಜಯಶ್ರೀ ಬಸವರಾಜು ಬಿ.ಕೆ.**

# ಉದ್ಗಾರ

ಅರಾಮಾಗಿ ಕೂತೆ, Mercedes
ಗಾಡಿಯ Bodyಯೆನಲ್ಲಾ ಸವರಿದೆ
Start ಆಯ್ತು, ಹಂಸದಂತೆ
ಸಾಗಿತು. ಹೋದಷ್ಟೂ ದೂರ
ಕಣ್ಣಿನಲ್ಲಿ Enjoy ಮಾಡಿದೆ, ನಂತರ
Footpathನಿಂದ ಎದ್ದು
1947 Model Scooterನಲ್ಲಿ
ಮನೆಗೆ ಹೊರಟೆ.



**ಎಂ.ವಿ. ವೆಂಕಟೇಶ್**

# ಕಾವ್ಯವಲ್ಲರಿ

ಕೆಲವರು ಗೊತ್ತಿಲ್ಲದೆ ಹೇಳುತ್ತಾರೆ
ನಾನೂ ಒಬ್ಬ ಕವಿಯೆಂದು
ಅವರು ಒಪ್ಪುವುದಿಲ್ಲ ಹೇಳದರೆ
ಕವಿ ನಾನಲ್ಲವೆಂದು.

ಬರೆಯುವುದು ಇಷ್ಟೊಂದು ಸಲೀಸಾಗಬಾರದು
ಓದುವುದೂ ಇಷ್ಟೊಂದು ಸಲೀಸಾಗಬಾರದು
ಆಗ ಮಾತ್ರ ಕೇಳುವವರಿಗೆ ಅದು ಸಹಜಧ್ವನಿ.

ಬರೆಯುತ್ತಾರೆ ಕೆಲವರು ಟನ್ನುಗಟ್ಟಳೆ
ಬರೆದು ತುಂಬುತ್ತಾರೆ ಟಿನ್ನುಗಟ್ಟಳೆ
ಅದಕ್ಕೇನಿಲ್ಲವಲ್ಲ ಕಟ್ಟುಕಟ್ಟಳೆ
ಆದರೆ ಅಲ್ಲುಳಯುವುದು ಮಾತ್ರ ತುದಿಪಿನ್ನಿನಷ್ಟು.

ಬರೆದ ಪದ್ಯಗಳೆಲ್ಲ ಕವಿತೆಯಾಗುವುದಿಲ್ಲ
ಎಲ್ಲ ಕವಿತೆಗಳೂ ಅರ್ಥವಾಗುವುದಿಲ್ಲ
ಅರ್ಥವಾದದ್ದೆಲ್ಲ ಕಾವ್ಯವೇನಲ್ಲ.

ಮೆರೆಸಿಲ್ಲವೇ ಪಂಪ ಕನ್ನಡದ ಪೆಂಪ
ಹರಿಸಿಲ್ಲವೇ ಕರುಣೆ ಬಸವಣ್ಣನಳ ಬಡಜನರ ಬವಣೆ.
ಬರೆಸಿಲ್ಲವೇ ವೀರನಾರಾಯಣ
ನಾರಣಪ್ಪನ ಮುಖೇನ
ಭಾರತದ ಕತೆಯ ಮನುಕುಲದ ವ್ಯಥೆಯ

ಕಲ್ಲುಸಕ್ಕರೆಯಂಥ ಕೀರ್ತನೆಗಳಂದ
ಹರಿಸಿಲ್ಲವೇ ಪುರಂದರ ಭಕ್ತಿಯ ಸಾರ

ಬರೆದಿದ್ದಾರಲ್ಲ ಬೇಂದ್ರೆ ಬೆದಬೆದ ಬೆಂದು
ಮಮ್ಮಲಮರುಗಿ ನೊಂದು
ಸಾವಿರದ ಕವಿತೆ ಬೆಳಕಿನಾ ಹಣತೆ
ಹಿಡಿದರೆ ಹಿಡಿತುಂಬ ಬಿಟ್ಟರೆ ಜಗವೆಲ್ಲ ಎಂದು
ಗೊತ್ತಿಲ್ಲವೇ ನಮಗೆ ನಿಮಗೆ ಎಲ್ಲರಿಗೂ ಸಂದು.

ಕುವೆಂಪುವಿನಿಂಪಾದ ಕವಿತೆಗಳೆಷ್ಟು ಚಂದ
ಅದರ ಛಂದೋಬಂಧವೆಷ್ಟು ಅಂದ


ಅಂದುಕೊಂಡದ್ದೆಲ್ಲ ಕಾವ್ಯವಾಯ್ತಲ್ಲ ಅಡಿಗರಂಥವರಿಗೆ
ಬರೆದದ್ದೆಲ್ಲ ಕೊರೆದದ್ದೆಲ್ಲ ಚಿನ್ನದ ಗೆರೆ.

ಒರೆಸಿಲ್ಲವೆ ಮಹದೇವ ನೂರು
ಬಡಜನರ ನೋವ ದುರ್ಬಲರ ಕಾವ.

ಕಾವ್ಯಕ್ಕೆ ಅನುಭವವೇ ಬಂಡವಾಲ ಮಾತೇ ಗತಿ
ಅರ್ಥವತ್ತಾಗಿ ಅರ್ಥಮೀರಿದ್ದು ಕಾವ್ಯ
ಇದು ತೂಕ ತಪ್ಪಿದರೆ ಕಾವ್ಯವಲ್ಲರಿ.

**ಕೆ.ಎಸ್. ಮಧುಸೂದನ**

# ‘ಶಿಲ್ಪಸಿರಿ’ ಯವರ ‘ಸಿರಿ’ ಕವನ ಸಂಕಲನ ಬಿಡುಗಡೆ






ದಿನಾಂಕ 25.07.2010ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಶಿಲ್ಪಸಿರಿಯವರ “ಸಿರಿ” (ಕವನ ಸಂಕಲನ) ಕೃತಿಯ ಲೋಕಾರ್ಪಣ ಸಮಾರಂಭವನ್ನು ಏರ್ಪಡಿಸಲಾಗಿತ್ತು. ದೆಹಲಿ ಕರ್ನಾಟಕ ಸಂಘದ ಕಾರ್ಯಾಧ್ಯಕ್ಷರು ಹಾಗೂ ಅಭಿಮತ ಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರ ಅಧ್ಯಕ್ಷತೆಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿಗಳಾದ ಶ್ರೀ ಅಗ್ರಹಾರ ಕೃಷ್ಣಮೂರ್ತಿಯವರು ಪುಸ್ತಕ ಬಿಡುಗಡೆ ಮಾಡಿದರು. ಕೇಂದ್ರ ಕಾನೂನು ಸಚಿವರಾದ ಶ್ರೀ ಎಂ. ವೀರಪ್ಪ ಮೊಯಿಲಿಯವರು ಅನಿವಾರ್ಯ ಕಾರಣಗಳಿಂದ ಕೃತಿಲೋಕಾರ್ಪಣೆಗೆ ಉಪಸ್ಥಿತರಾಗಲು ಸಾಧ್ಯವಾಗದಿದ್ದರೂ ಶುಭಸಂದೇಶ ಕಳುಹಿಸಿ ಕಾರ್ಯಕ್ರಮಕ್ಕೆ ಶುಭ ಕೋರಿದ್ದರು.

ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟನೆಯನ್ನು ಮಾಡಿದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಸಿರಿ ಕವನ ಸಂಕಲನದಲ್ಲಿ ಸ್ತ್ರೀಯ ಮುಗ್ಧತೆ ಮೂಡಿಬಂದಿದೆ, ಕವಿತೆಗಳು ತುಂಬಾ ಚೆನ್ನಾಗಿವೆ ಎಂದರು. ಸಿರಿ ಎನ್ನುವ ಶಬ್ದ ದಕ್ಷಿಣ ಕನ್ನಡದಲ್ಲಿ ಬಹಳ ಮಹತ್ವದ ಸ್ಥಾನ ಹೊಂದಿದೆ ಅದೇಂದರೆ ಒಬ್ಬ ದಲಿತ ಮಹಿಳೆಗೆ ಅನೇಕ ರೀತಿಯ ತೊಂದರೆಗಳನ್ನು ಜನರು ಕೊಡುತ್ತಾರೆ. ಮೊದಲು ಸಹಿಸಿಕೊಂಡು, ನಂತರ ಶೌರ್ಯದಿಂದ ಎದುರಿಸುತ್ತಾಳೆ. ಜನರು ಅವಳನ್ನು ‘ಸಿರಿ’ ದೇವತೆ ಎಂದು ಗೌರವಿಸಿ ಪೂಜಿಸುತ್ತಾರೆ. ಈಗಲೂ ದಕ್ಷಿಣ ಕನ್ನಡದಲ್ಲಿ ದೇವಸ್ಥಾನ ಮಾಡಿ ಅಲ್ಲಿ ಸಿರಿಪೂಜೆ ಇತ್ಯಾದಿ ಕಾರ್ಯಕ್ರಮಗಳು ಜರುಗುತ್ತವೆ. ಹಾಗಾಗಿ ತಾವು ಯಾವ ದೃಷ್ಟಿಯಿಂದ ‘ಸಿರಿ’ಎಂಬ ಶಬ್ದ ಪ್ರಯೋಗ ಮಾಡಿದಿರಿ ಎಂದು ಶಿಲ್ಪ ಅವರಿಗೆ ಪ್ರಶ್ನಿಸಿದರು ಹಾಗೂ ಅವರಿಗೆ ಶುಭ ಹಾರೈಸಿದರು.

ಶಿಲ್ಪಾಸಿರಿಯವರು ಸಿರಿ ಎಂದರೆ, ಶ್ರೀಮಂತಿಕೆ, ಸಮೃದ್ಧಿ ಹಾಗೂ ತನ್ನ ಪತಿ ಸಿರಿಗೆರೆಯವರು. ಹೀಗಾಗಿ ಈ ಶಬ್ದ ಪ್ರಯೋಗಿಸಿದೆ. ಆದರೆ, ಅದಕ್ಕೆ ದಕ್ಷಿಣ ಕನ್ನಡ ಪರಿಸರದಲ್ಲಿ ಇಂತಹ ಸುಂದರ ಕಥೆ ಇರುವುದು ಇಂದೇ ತಿಳಿದು ಸಂತೋಷವಾಯಿತು ಎಂದರು.

ಅಗ್ರಹಾರ ಕೃಷ್ಣಮೂರ್ತಿಯವರು ಶಿಲ್ಪಾಸಿರಿ ಲೇಖಕಿಯ ಮನಸ್ಸಿನಾಳದ ಭಾವನೆ, ತುಮುಲ, ಇಚ್ಛೆ, ಹೋರಾಟ ಹೇಗೆ ಹಂತ ಹಂತವಾಗಿ ಮೂಡಿಬಂದಿದೆ ಎಂದು ಯಥಾವತ್ತಾಗಿ ವರ್ಣಿಸುತ್ತಾ, ಪ್ರೀತಿ, ಪ್ರೇಮ ಹೋರಾಟದಲ್ಲಿ ಸ್ವಚ್ಛಂದ ಪಕ್ಷಿಯಂತೆ, ಕೆಲವೊಮ್ಮೆ ಹರಿಯುವ ನದಿಯಲ್ಲಿ ಚಿಕ್ಕ ತೊರೆ, ರಭಸ, ಅಂಕುಡೊಂಕು, ಏರಿಳಿತ, ಎಲ್ಲ ಬರುವಂತೆ ಜೀವನದ ಹಂತದಲ್ಲಿ ಬರುವ ಎಲ್ಲ ಘಟನೆ, ಭಾವನೆಯನ್ನು ಇಂತಹ ಚಿಕ್ಕವಯಸ್ಸಿನಲ್ಲಿಯೇ ಪ್ರಥಮ ಕೃತಿಯಲ್ಲಿಯೇ ಬಹುಚೆನ್ನಾಗಿ ಮೂಡಿಸಿದ್ದಾರೆ. ಅವರ ಕವನ ಸಂಕಲನದಲ್ಲಿಯ ‘ನಾನಾಗಿದ್ದರೆ’ ಎನ್ನುವ ಕವಿತೆ ಪಂಚಪತಿವ್ರತೆಯರ ಬಗ್ಗೆ ವಿಭಿನ್ನ ವಿಚಾರದಲ್ಲಿ ಹೊಸ ವೈಚಾರಿಕತೆಯ ಭಾವನೆಯನ್ನು ಮನೋಜ್ಞವಾಗಿ ಬರೆದಿದ್ದಾರೆ. ಅತಿ ಶ್ರೇಷ್ಠ ಕವಿತೆ ಎಂದು ಮನಃಪೂರ್ತಿಯಾಗಿ ಹೊಗಳಿ ಶಿಲ್ಪಾಸಿರಿಯವರಿಂದ ಆ ಕವಿತೆ ಓದಿಸಿದರು. ಸಭಿಕರು ಕವಿತೆಯನ್ನು ಪ್ರಶಂಸಿಸಿದರು.

ಡಾ. ದೊಡ್ಡರಂಗೇಗೌಡರು ಮುನ್ನುಡಿ ಬರೆದ 55 ಕವಿತೆಗಳುಳ್ಳ ಅನ್ನಪೂರ್ಣ ಪ್ರಕಾಶನದ, ಪ್ರಕಾಶಕರಾದ ಸಿರಿಗೆರೆ ಯರಿಸ್ವಾಮಿ, ಭಾರತದ ರಾಜಧಾನಿ ದೆಹಲಿಯಲ್ಲಿ ಈ ಕವನ ಸಂಕಲನ ಬಿಡುಗಡೆಗೊಳಿಸುವ ಕನಸು ನನಸಾದುದರ ಬಗ್ಗೆ ಸಂತೋಷ ವ್ಯಕ್ತಪಡಿಸುತ್ತಾ ಸಹಕಾರ ನೀಡಿದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಹಾಗೂ ಲೋಕಾರ್ಪಣೆ ಮಾಡಿದ ಶ್ರೀ ಅಗ್ರಹಾರ ಕೃಷ್ಣಮೂರ್ತಿಯವರಿಗೆ ಅಭಿನಂದನೆ ಸಲ್ಲಿಸಿದರು.

ತನ್ನ ಕವಿತೆಯ ಬಗ್ಗೆ ಶ್ರೀ ಅಗ್ರಹಾರ ಕೃಷ್ಣಮೂರ್ತಿಯವರ ಅಭಿಪ್ರಾಯ ಕೇಳಿ ಹೆಮ್ಮೆಯೆನಿಸಿತು ಎಂದು ಶಿಲ್ಪಾಸಿರಿಯವರು ಧನ್ಯವಾದ ಅರ್ಪಿಸಿದರು. ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

■ ಡಾ.ಸುಮಂಗಲಾದೇವಿ



‘ಸಿರಿ’ ಕವನ ಸಂಕಲನದ ಬಿಡುಗಡೆ ನಂತರ ಅಗ್ರಹಾರ ಕೃಷ್ಣಮೂರ್ತಿಯವರು ಮಾತನಾಡುತ್ತಿರುವುದು

ಸುತ್ತ ಮುತ್ತ

# ದೆಹಲಿ ಕನ್ನಡ ಲೇಡಿಸ್ ಕ್ಲಬ್‌ನ ಚಟುವಟಿಕೆಗಳು

18.07.2010ರ ಭಾನುವಾರ, ನವದೆಹಲಿಯಲ್ಲಿರುವ ನ್ಯಾಶನಲ್ ಅಸೋಸಿಯೇಶನ್ ಆಫ್ ಬ್ಲೈಂಡ್ಸ್ (ಎನ್‌ಎಬಿ) ಮಕ್ಕಳಿಗೆ ದೆಹಲಿ ಕನ್ನಡ (ಸ್ನೇಹಾ) ಲೇಡಿಸ್ ಕ್ಲಬ್‌ನವರು ಲಯನ್ಸ್ ಕ್ಲಬ್‌ನವರ ಸಹಯೋಗದೊಂದಿಗೆ ತಜ್ಞ ವೈದ್ಯರನ್ನು ಕರೆಸಿ 350ಕ್ಕೂ ಹೆಚ್ಚಿನ ಮಕ್ಕಳಿಗೆ ಕಣ್ಣು, ಕಿವಿ, ಮೂಗು, ಚರ್ಮ ಹಾಗೂ ಶಾರೀರಿಕ ಬೆಳವಣಿಗೆಯ ಬಗ್ಗೆ ಪರೀಕ್ಷಿಸಿ, ಸಲಹೆ ನೀಡಿದರು. ಈ ಕಾರ್ಯದಲ್ಲಿ ಸ್ವಯಂ ಸೇವಕಿಯರಾಗಿ ಸುಮಿತ್ರಾರಾವ್, ರಂಗಮಣಿರಾವ್, ರಾಧಾ ಕೌಜಲಗಿ, ಜಯಾ ಆಚಾರ್ಯ, ರಾಧಿಕಾ ರಾವ್, ಮಾಧವಿ, ಎನ್. ಅರುಣ, ಯಶೋಧರರಾವ್, ಸರೋಜಮಾಧವ, ಡಾ. ಅಹಲ್ಯಾ ಚಿಂತಾಮಣಿ, ಸ್ವರ್ಣಲತಾ ಅವರು ನೆರವೇರಿಸಿಕೊಟ್ಟರು. ಇದು ದೆಹಲಿ ಕನ್ನಡ ಲೇಡಿಸ್ ಕ್ಲಬ್‌ನ ವಾರ್ಷಿಕ ಕಾರ್ಯಚಟುವಟಿಕೆ.

ದಿನಾಂಕ : 21.07.2010 ಬುಧವಾರ : ದೆಹಲಿ ಕನ್ನಡ ಲೇಡಿಸ್ ಕ್ಲಬ್ All India Foot Reflexology Association ನ ಕಾರ್ಯದರ್ಶಿ ಶ್ರೀಮತಿ ಮಂಜುಳಾ ಹನಗೋಡ್ (Foot Reflexology ವೈದ್ಯೆ) ಅವರನ್ನು ಆಹ್ವಾನಿಸಿ Accu Pressure ಮತ್ತು Foot Reflexology ಬಗ್ಗೆ ಮಾಹಿತಿಯ ಬಗ್ಗೆ ಮಾತನಾಡಿದರು. ಅವರು ಬಹಳ ಸರಳವಾಗಿ ಅರಿವು ಮೂಡಿಸಿ ಪ್ರಾಯೋಗಿಕವಾಗಿ ವಿವರವಾಗಿ ತಿಳಿಸಿಕೊಟ್ಟರು. ದೇಹದ ಎಲ್ಲಾ ಭಾಗಗಳ ಕೇಂದ್ರ ಬಿಂದುಗಳು ಕಾಲಿನ ಪಾದದ ತಳದಲ್ಲಿ ಕ್ರೋಢಿಕರಿಸಿರುವುದೆಂದೂ ತಳ ಪಾದದ 5 ಬೆರಳುಗಳಲ್ಲೂ ತಲೆ ಕತ್ತು ಮತ್ತು ಬೆನ್ನು ಭಾಗಗಳಿಗೆ ಸಂಬಂಧಪಟ್ಟ ಕೇಂದ್ರ ಬಿಂದುಗಳು ಹೃದಯ, ವಪೆ ಮತ್ತು



ಶ್ರೀಮತಿ ಮಂಜುಳಾ ಹನಗೋಡ್ ಮಾತನಾಡುತ್ತಿರುವುದು

ತೊಡೆಯ ಬಿಂದುಗಳು ಪಾದದಡಿ ಮಧ್ಯಭಾಗದಲ್ಲೂ, ಕಾಲುಗಳ ಕೇಂದ್ರ ಬಿಂದುಗಳು ಹಿಮ್ಮಡಿ ಭಾಗದಲ್ಲೂ ಇರುವುದಾಗಿಯೂ ಶರೀರದ ಅಕ್ಕಪಕ್ಕ ಭಾಗಗಳು ಅಂಗೈನ ಉಬ್ಬುಗಳಲ್ಲಿರುವುದಾಗಿಯೂ ಮತ್ತು ಅದನ್ನು ಯಾವ ರೀತಿ ಉಪಯೋಗಿಸಬೇಕೆಂದು ಪ್ರಾಯೋಗಿಕವಾಗಿ ತೋರಿಸಿಕೊಟ್ಟರು. ಸದಸ್ಯೆಯರು ಮತ್ತು ಡಾ. ಮಂಜುಳಾರವರು ಪರಸ್ಪರ ಪ್ರಶ್ನೋತ್ತರ ಚರ್ಚೆಗಳನ್ನು ಮಾಡಿ Reflexology ಯ ಮಹತ್ವವನ್ನು ಅರಿತರು. ದೇಹದ ಅನೇಕ ರೋಗಗಳಿಗೆ ಈ ವಿಧಿ ವಿಧಾನದಿಂದ ಔಷಧಿ ಇಲ್ಲದೆಯೇ ಗುಣಪಡಿಸಲು ಸಾಧ್ಯ ಎಂದು ತೋರಿಸಿಕೊಟ್ಟ ಮಂಜುಳಾ ಅವರಿಂದ ದೆಹಲಿ ಕನ್ನಡ ಲೇಡಿಸ್ ಕ್ಲಬ್ ಸದಸ್ಯೆಯರು ಲಾಭದಾಯಕವಾದ ಮಾಹಿತಿಯನ್ನು ಪಡೆದರು.

■ **ಡಾ. ಅಹಲ್ಯಾ ಚಿಂತಾಮಣಿ**



**ಚಿತ್ರದಲ್ಲಿ : ಜಯಂತ ಕಾಯ್ಕಿಣಿ ಅವರ ಜೊತೆ ದೆಹಲಿ ಕನ್ನಡ ಲೇಡಿಸ್ ಕ್ಲಬ್‌ನ ಹಿರಿಯ ಸದಸ್ಯೆಯರಾದ ಡಾ. ಅಹಲ್ಯಾಚಿಂತಾಮಣಿ, ಶ್ರೀಮತಿ ರಾಧಾ ಕೌಜಲಗಿ, ಕ್ಲಬ್‌ನ ಉಪಾಧ್ಯಕ್ಷೆ ಶ್ರೀಮತಿ ಸುಮಿತ್ರಾ ರಾವ್**

ಸೌಂದರ್ಯ

## ಮುಖದ ಹೊಳಪು, ಕಾಂತಿ, ಮೃದುತ್ವಕ್ಕೆ

**ಒಡೆದ ಹಾಲಿನ ಚರಟ –3 ಟೀ ಚಮಚ, ಲಿಂಬೆ ರಸ – ಅರ್ಧ ಟೀ ಚಮಚ, ಜೇನು ತುಪ್ಪ–ಅರ್ಧ ಟೀ ಚಮಚ**

**ಈ ಮೇಲಿನ ಮೂರನ್ನು ಕಲಸಿ ಮುಖಕ್ಕೆ ತುಸು ದಪ್ಪವಾಗಿ ಲೇಪಿಸಿ ಅರ್ಧ ಗಂಟೆಯ ಬಳಿಕ ಮುಖ ತೊಳೆಯಿರಿ. ಮುಖದ ನೆರಿಗೆಗಳೆಲ್ಲ ಮಾಯವಾಗಿ ತಾಜತನ ಮೂಡುತ್ತದೆ.**

■ **ಸರೋಜ ವಿಜಯಕುಮಾರ್**

# ಅನಿಲ್‌ರಾವ್ ಅವರಿಗೆ ವಿದಾಯ



ಅನಿಲ್‌ರಾವ್ ಅವರನ್ನು ಬೀಳ್ಕೊಡುತ್ತಿರುವ ಗೋಪಾಲಕೃಷ್ಣ ಭಟ್

ಕಳೆದ ಮೂರು ವರ್ಷಗಳಿಂದ ಕನ್ನಡಬಳಗದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀಯುತ ಅನಿಲ್ ರಾವ್ ಅವರಿಗೆ ಹಾಸನಕ್ಕೆ ವರ್ಗಾವಣೆಯಾದ ಪ್ರಯುಕ್ತ ಬೀಳ್ಕೊಡುಗೆ ಸಮಾರಂಭವನ್ನು ಹೊಸ ರಾಜೇಂದ್ರನಗರದ ಗೌಡ ಸಾರಸ್ವತ ಸಮಾಜದ ಮಂದಿರದಲ್ಲಿ ದಿನಾಂಕ 03.07.2010ರಂದು ಹಮ್ಮಿಕೊಳ್ಳಲಾಗಿತ್ತು. ಸಂಜೆ 7.30ಕ್ಕೆ ಭಜನೆ, 8.30ಕ್ಕೆ ಶ್ರೀಕೃಷ್ಣನಿಗೆ ಸರ್ವಾಲಂಕಾರ ಪೂಜೆಯ ನಂತರ ಶ್ರೀಯುತ ಅನಿಲ್ ರಾವ್ ಅವರಿಗೆ ಸ್ಮರಣಿಕೆ ಹೂಗುಚ್ಛವನ್ನಿತ್ತು ಶಾಲು ಹೊದಿಸಿ ಸತ್ಕರಿಸಲಾಯಿತು. ಶ್ರೀಯುತರಾದ ಎಸ್. ಆರ್. ಕದಂ, ರವೀಂದ್ರನಾಥ್, ಮಂಜುನಾಥ ಭಟ್, ಶ್ರೀಮತಿ ಶಾರದಾ ಸಂದರ್ಭೋಚಿತವಾಗಿ ಮಾತನಾಡಿದರು. ಶ್ರೀ ಅನಿಲ್ ರಾವ್ ಅವರು ತಮಗೆ ಮೂರು ವರ್ಷಗಳಿಂದ ಸಹಕಾರವನ್ನಿತ್ತ ಎಲ್ಲರಿಗೂ ಕೃತಜ್ಞತೆಯ ಮಾತುಗಳನ್ನಾಡಿದರು. ಕಾರ್ಯದರ್ಶಿ ಶ್ರೀ ಗೋಪಾಲಕೃಷ್ಣ ಭಟ್ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ನಂತರ ಭೋಜನ ವ್ಯವಸ್ಥೆಯನ್ನು ಮಾಡಲಾಗಿತ್ತು. ಬಳಗಕ್ಕೆ ಆಯ್ಕೆಯಾದ ನೂತನ ಕಾರ್ಯಕಾರಿ ಮಂಡಳಿ ಇಂತಿದೆ.

| | | |
|---|---|---|
| ಶ್ರೀ ಮಂಜುನಾಥ ಭಟ್ | : | ಅಧ್ಯಕ್ಷರು |
| ಶ್ರೀ ರವೀಂದ್ರ ನಾಥ್ | : | ಉಪಾಧ್ಯಕ್ಷರು |
| ಶ್ರೀ ಗೋಪಾಲಕೃಷ್ಣಭಟ್ | : | ಕಾರ್ಯದರ್ಶಿ |
| ಶ್ರೀ ಮಹಾಲಿಂಗೇಶ್ವರ | : | ಕೋಶಾಧಿಕಾರಿ |

ಸದಸ್ಯರು : ಶ್ರೀ ಎಸ್. ಅರ್. ಕದಂ, ಶ್ರೀ ಅಶ್ವತ್ಥನಾರಾಯನ ಶೆಟ್ಟಿ, ಶ್ರೀ ದತ್ತಾತ್ರೇಯ, ಶ್ರೀಮತಿ ಶಾರದಾ.

■ **ಗೋಪಾಲಕೃಷ್ಣ**

# ಡಾ॥ ಬಿ.ಟಿ. ಚಿದಾನಂದ ಮೂರ್ತಿಯವರ ಚೈನಾ ಪ್ರವಾಸ

ಪ್ರೊಫೆಸರ್ ಡಾ॥ ಬಿ.ಟಿ. ಚಿದಾನಂದ ಮೂರ್ತಿಯವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಆಯುಶ್ ವಿಭಾಗದ ಮುಖಾಂತರ ಮೇ 29 ರಿಂದ ಜೂನ್ 6ನೇ ತಾರೀಕಿನವರೆಗೆ ಚೈನಾ ದೇಶದ ಶಾಂಘಾಯ್ನಲ್ಲಿ ಆಯೋಜಿಸಿದ್ದ ವರ್ಲ್ಡ್ ಎಕ್ಸ್‌ಪೋ 2010 ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ 4 ಯೋಗ ಪಟುಗಳನ್ನೊಳಗೊಂಡ ಗುಂಪಿನ ರುವಾರಿಯಾಗಿ ದಿನ ನಿತ್ಯ 8 ಅವಧಿಯ ಯೋಗಾಭ್ಯಾಸವನ್ನು ಪ್ರದರ್ಶಿಸಿ ಜನ ಮೆಚ್ಚುಗೆಗಳಿಸಿದರು. ಈ ಗುಂಪಿನಲ್ಲಿ ಕರ್ನಾಟಕದ ಬೆಳಗಾವಿಯ ಒಬ್ಬ ಯೋಗ ಪಟು ಶ್ರೀ ಸಿದ್ದಪ್ಪ ಎಫ್ ನರಗಟ್ಟಿಯವರು ಸಹ ಭಾಗವಹಿಸಿದ್ದರು.

ದಿನದ 8 ಅವಧಿಯ ಯೋಗಾಭ್ಯಾಸದ ಪ್ರದರ್ಶನದಲ್ಲಿ ಪ್ರತಿಯೊಂದು ಪ್ರದರ್ಶನದಲ್ಲೂ ಸುಮಾರು 2000 ಅಭ್ಯರ್ಥಿಗಳು ಭಾಗವಹಿಸಿದ್ದರು. ಅಂದರೆ ದಿನನಿತ್ಯ 8 ಪ್ರದರ್ಶನದಲ್ಲಿ ಸುಮಾರು 16000 ಜನರು ಭಾಗವಹಿಸಿ ಅದರ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ.



ಚೀನಾದಲ್ಲಿ ಪ್ರದರ್ಶನ ನೀಡುತ್ತಿರುವ ಡಾ. ಬಿ.ಟಿ. ಚಿದಾನಂದ ಮೂರ್ತಿ

ಪ್ರದರ್ಶನದಲ್ಲಿ ಡಾ॥ ಚಿದಾನಂದ ಮೂರ್ತಿಯವರ ಹಲವು ಬಗೆಯ ಶಿರ ಶಾಸನ, ನೌಲಿಕ್ರಿಯೆ, ಹಾಸ್ಯಯೋಗ ಇತ್ಯಾದಿ ಯೋಗಗಳು ಒಳಗೊಂಡಿದ್ದು ಜನರ ಮನ್ನಣೆ ಶ್ಲಾಘನೆಯನ್ನು ಗಳಿಸಿರುತ್ತಾರೆ. ಅದರ ಜೊತೆ ಇಂಡಿಯನ್ ಮತ್ತು ಕಾನ್ಸಿಲೇಟ್ ಜನರಲ್ ಶಾಂಘಾಯ್‌ನಲ್ಲೂ ಸಹ ಭಾಷಣವನ್ನು ಮಾಡಿ ಅವರ ಮೆಚ್ಚುಗೆಗಳಿಸಿರುತ್ತಾರೆ.

ಪ್ರದರ್ಶನಗೊಂಡ ಯೋಗ ಕಾರ್ಯಕ್ರಮವನ್ನು ಚೈನಾದ ಪ್ರಸಿದ್ಧ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದು, ವರ್ಲ್ಡ್ಎಕ್ಸಪೊವಿನ ವೆಬ್ಸೈಟ್ನಲ್ಲಿ ಸಹ ಪ್ರಕಟಗೊಳಿಸಿದ್ದಾರೆ. ಇದರ ಜೊತೆ ಶಾಂಘ್ಯಾಯಲ್ಲಿ ಇರುವ ಭಾರತ ಸಂಘದ ಪ್ರತಿನಿಧಿಗಳನ್ನೂ ಸಹ ಭೇಟಿಮಾಡಿ ಬಂದಿದ್ದಾರೆ. ಇದರಲ್ಲಿ ಕನ್ನಡ, ತಮಿಳು, ತೆಲುಗು ಇತ್ಯಾದಿಯವರು ಸಹ ಭಾಗವಹಿಸಿದ್ದರು.

**ಈ ವರ್ಷದ ಶ್ರೀ ರಾಘವೇಂದ್ರ ಸ್ವಾಮಿಗಳವರ ಆರಾಧನಾ ಮಹೋತ್ಸವವು ದಿನಾಂಕ 25,26 ಹಾಗೂ 27ನೇ ಆಗಸ್ಟ್, 2010ರಂದು ಸಂಘದ ಬಳಿ ಇರುವ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ನಡೆಯಲಿದೆ, ಎಂದು ಮಠದ ವ್ಯವಸ್ಥಾಪಕರು ತಿಳಿಸಿದ್ದಾರೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.**

**339ನೇ ಆರಾಧನಾ ಮಹೋತ್ಸವವನ್ನು ಆಗಸ್ಟ್ 26, 2010 ರಂದು ಶ್ರೀ ಮಧ್ವ ಸಂಘ, ಎ2/117, ಸಫ್ದರ್‌ಜಂಗ್ ಎನ್‌ಕ್ಲೇವ್‌ನಲ್ಲಿರುವ ಕೃಷ್ಣ ಮಂದಿರದಲ್ಲಿ ನಡೆಯಲಿದೆ.**

**ಚಿತ್ರಕಲಾ ಪ್ರದರ್ಶನ** : ಕನ್ನಡದ ಚಿತ್ರ ಕಲಾವಿದ ಶ್ರೀ ಚಿಕ್‌ಮಠ್ ಎಫ್.ವಿ. ಅವರ ಇತ್ತೀಚಿನ ಕಲಾಕೃತಿಗಳ ಪ್ರದರ್ಶನವು ಆಗಸ್ಟ್ 15ರಿಂದ 21ರವರೆಗೆ ಐಫೆಕ್ಸ್ ಗ್ಯಾಲರಿಯಲ್ಲಿ ನಡೆಯಲಿದೆ. ಕರ್ನಾಟಕ ಸರಕಾರದ ಹೆಚ್ಚುವರಿ ವಿಶೇಷ ಪ್ರತಿನಿಧಿ ಬೈಕೆರೆ ನಾಗೇಶ್ ಉದ್ಘಾಟಿಸಲಿದ್ದು, ಕೇಂದ್ರ ಲಲಿತಾ ಕಲಾ ಅಕಾಡೆಮಿಯ ಉಪಾಧ್ಯಕ್ಷ ಕೆ.ಆರ್.ಸುಬ್ಬಣ್ಣ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.


WithBestCompliments

NayakAviationServices
Private Limited

International & Domestic Freight Forwarders.

***Corporate Office: L-333, Mahipalpur Extension, New Delhi – 110037,***

***Ph# 011-26781131/32***
***email:info@nayakaviation.com***

***Branches at : Ahmedabad, Bengaluru, Chennai, Gauhati, Hyderabad, Kolkata, Mumbai, Pune***
***Singapore, HongKong.***







GO FOR A SAVINGS ACCOUNT

Bank of India

Delhi Karnataka Sangha's Abhimatha Monthly,
August 2010, Price Rs.1/- RNI Regn. No. 53405/91, DL-SW-15/4016/10-11-12
Printout Date : August 8th / 9th, Postal Date :10th / 11th, Total Pages-20




Editor: Vasantha Shetty Bellare, Printed & Published by R. Renu Kumar, General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at R.V. Printing Press, C-97, Okhla Industrial Area, Phase-I, New Delhi-110020, Tel: 26815778, 40545298,